Swabhimani Sahakari

Pages : 34 / 20₹

# ಸ್ವಾಭಿಮಾನಿ ಸಹಕಾರಿ


ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ


ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಯುಕ್ತ ಸಹಕಾರಿಯ ರಜತ ಮಹೋತ್ಸವ 2026

Volume - 23
Issue - 02
February - 2026

## 2026-27ರ ಕೇಂದ್ರ ಬಜೆಟ್: ಗಾತ್ರ ರೂ.53,47,315 ಕೋಟಿ
## ಆರ್ಥಿಕ ಸುಸ್ಥಿರತೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಯುವಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವತ್ತ ಗಮನ






ಬಂಡವಾಳ ಹೂಡಿಕೆ: ರೂ. 12.2 ಲಕ್ಷ ಕೋಟಿ ಬೃಹತ್ ಬಂಡವಾಳ ವೆಚ್ಚದ ಗುರಿ.
ಯುವ ಶಕ್ತಿ: ಕೌಶಲ್ಯ ಅಭಿವೃದ್ಧಿ, ಉದ್ಯೋಗ ಸೃಷ್ಟಿ ಮತ್ತು ಉದ್ಯಮಶೀಲತೆಗೆ ಒತ್ತು.
ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ರೂ.7 ಲಕ್ಷ ಕೋಟಿಗೂ ಅಧಿಕ ಹಣ ಹಂಚಿಕೆ, ರೂ. 10,000 ಕೋಟಿ ವೆಚ್ಚದಲ್ಲಿ ಚಾಂಪಿಯನ್ MSME ಸ್ಥಾಪನೆ.
ಕೃಷಿಗೆ ರೂ.1.62 ಲಕ್ಷ ಕೋಟಿ ಹಂಚಿಕೆ.
ಮಹಿಳಾ "ಶೀ" ಮಾರ್ಟ್ ಯೋಜನೆ ಆರಂಭ.
ಸಹಕಾರ ಕ್ಷೇತ್ರ ಹಾಗೂ ಗ್ರಾಮೀಣ ಆರ್ಥಿಕತೆಗೆ ಉತ್ತೇಜನ.




ಸೌಹಾರ್ದ ಸಹಕಾರಿಗಳ ಸಂಖ್ಯೆ: 6652

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1755

ಸ್ವಾಭಿಮಾನಿ ಸಹಕಾರಿ





ಜಿ. ನಂಜನಗೌಡ

ಆತ್ಮೀಯ ಸಹಕಾರಿ ಬಂಧುಗಳಿಗೆ ಶಿವರಾತ್ರಿಯ ಹಬ್ಬದ ಹಾರ್ದಿಕ ಶುಭಾಶಯಗಳು. ದೇವರು ತಮಗೆ ಸುಖ ಶಾಂತಿ ನೆಮ್ಮದಿ ನೀಡಲಿ ಉತ್ತರೋತ್ತರ ಅಭಿವೃದ್ಧಿ ಕರುಣಿಸಲಿ.

# ಸಹಕಾರಿ ಅಧ್ಯಯನ, ಸಹಕಾರಿಯ ರಕ್ಷಣೆ, ಸಹಕಾರಿಯ ಪ್ರಗತಿ ನಿರಂತರವಾಗಿರಲಿ

ಆತ್ಮೀಯ ಸಹಕಾರಿ ಬಂಧುಗಳಿಗೆ ಶಿವರಾತ್ರಿಯ ಹಬ್ಬದ ಹಾರ್ದಿಕ ಶುಭಾಶಯಗಳು. ದೇವರು ತಮಗೆ ಸುಖ ಶಾಂತಿ ನೆಮ್ಮದಿ ನೀಡಲಿ ಉತ್ತರೋತ್ತರ ಅಭಿವೃದ್ಧಿ ಕರುಣಿಸಲಿ.

ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸೌಹಾರ್ದ ಸಹಕಾರಿ ಚಳುಳಿಯ ರಜತ ಮಹೋತ್ಸವ ವರ್ಷ ಆಚರಣೆ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯಾತಿ ಗಣ್ಯರೆಲ್ಲ ಸೌಹಾರ್ದ ಸಹಕಾರಿ ಚಳುವಳಿಯ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದ್ದಾರೆ. ರಾಜ್ಯ ಸರಕಾರ ಸೌಹಾರ್ದ ಸಹಕಾರಿಗಳ ಜೊತೆಯಲ್ಲಿದೆ ಎಂದು ತಿಳಿಸಿದ್ದಾರೆ. ಜೊತೆಗೆ ಠೇವಣಿದಾರರ ಹಿತಾಸಕ್ತಿಗೆ ಆದ್ಯತೆ ನೀಡುವಂತೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಈ ಕಾರ್ಯಕ್ರಮ ಸಂಯುಕ್ತ ಸಹಕಾರಿಗೆ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ಉತ್ಸಾಹವನ್ನು ತಂದಿದೆ. ಈ ಕಾರ್ಯಕ್ರಮ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಒಂದು ಉತ್ತಮ ಸಂದೇಶವನ್ನು ನೀಡಿದೆ ಎಂದು ನಾನು ಭಾವಿಸುತ್ತೇನೆ.

ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು 2026 ರಿಂದ 2030 ರ ವರೆಗಿನ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳ ಸಬಲೀಕರಣಕ್ಕಾಗಿ ಯೋಜನೆಯನ್ನು ಸಿದ್ಧಪಡಿಸಿದ್ದಾರೆ. **"ಸಹಕಾರಿ ಸಂಸ್ಥೆಗಳ ಅಧ್ಯಯನ, ಸಹಕಾರಿ ಸಂಸ್ಥೆಗಳ ರಕ್ಷಣೆ ಮತ್ತು ಸಹಕಾರಿ ಸಂಸ್ಥೆಗಳ ಬೆಳವಣಿಗೆ" (ICA 2026–2030 Strategy: Practice, Promote and Protect)** ನಮ್ಮ ಆದ್ಯತೆ ಇರಬೇಕು ಎಂದು ತಿಳಿಸಿದ್ದಾರೆ. ಸರಕಾರಿಗಳ ಪ್ರೋತ್ಸಾಹ, ಸಹಕಾರಿ ಮುಂದಾಳುಗಳು ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸುವ ಅಗತ್ಯತೆಯನ್ನು ತಿಳಿಸಿದ್ದಾರೆ. ಈ ಬಗ್ಗೆ ಸೌಹಾರ್ದ ಸಹಕಾರಿಗಳು ಗಮನ ಹರಿಸುವುದು ಸಧ್ಯದ ಅಗತ್ಯತೆ ಎಂದು ನನ್ನ ಭಾವನೆ.

ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭವಾಗಿ 25 ವರ್ಷಗಳು ತುಂಬಿವೆ. ಈಗ ನಮ್ಮ ಪ್ರಗತಿಯ ಬಗ್ಗೆ ಸಿಂಹಾವಲೋಕನ ಮಾಡುತ್ತ ನಮ್ಮ ಮುಂದಿನ ಬೆಳವಣಿಗೆಯ ಬಗ್ಗೆ ಗಮನ ಹರಿಸಬೇಕಿದೆ. ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿಯವರ ಸಹಕಾರಿ ಅಧ್ಯಯನ, ಸಹಕಾರಿಯ ರಕ್ಷಣೆ ಮತ್ತು ಸಹಕಾರಿಯ ಪ್ರಗತಿ ಮಂತ್ರ ನಮ್ಮ ಉಸಿರಾಗಬೇಕಿದೆ. ಸಹಕಾರಿಗಳಿಗೆ ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಅಧ್ಯಯನವನ್ನು ಮಾಡುವ ಪ್ರವೃತ್ತಿಯನ್ನು ಹೆಚ್ಚಿಸುವುದು. ಸಹಕಾರಿಗಳಿಗೆ ಶಿಕ್ಷಣ ತರಬೇತಿ ನೀಡುವುದು. ಸಕಾರಾತ್ಮಕ ಭಾವನೆಗಳನ್ನು ಹೆಚ್ಚಿಸುವುದು. ಸಹಕಾರಿ ತಮ್ಮದೆನ್ನುವ ಭಾವನೆ ರೂಢಿಸುವುದು. ಸಹಕಾರಿಯ ಬೆಳವಣಿಗೆಗೆ ತಮ್ಮ ಪಾಲಿನ ಕರ್ತವ್ಯಗಳನ್ನು ನಿರ್ವಹಿಸುವುದು. ಇವುಗಳ ನಿರ್ವಹಣೆಯಿಂದ ಸಹಕಾರಿಯ ಪ್ರಗತಿ ಸಾಧ್ಯ. ಪ್ರಗತಿ ನಿರಂತರವಾಗಿರುವಂತೆ ಎಚ್ಚರಿಕೆಯ ಕ್ರಮ ತೆಗೆದುಕೊಳ್ಳಬೇಕು.

ಸಹಕಾರಿ ಕ್ಷೇತ್ರದ ನಿರಂತರ ಪ್ರಗತಿಯಿಂದ ಸಹಕಾರಿಗಳ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿ ಸಾಧ್ಯವಾಗುತ್ತದೆ. ಬನ್ನಿ ಸಹಕಾರಿ ಕ್ಷೇತ್ರದ ಪ್ರಗತಿಯಿಂದ ಆತ್ಮ ನಿರ್ಭರ ಭಾರತ ನಿರ್ಮಾಣದಲ್ಲಿ ಸೌಹಾರ್ದ ಸಹಕಾರಿಗಳು ಪಾಲುದಾರರಾಗೋಣ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.............................................. 2
ಸಂಪಾದಕೀಯ.............................................. 3
ಜ್ಞಾನ ಜ್ಯೋತಿ.............................................. 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................................ 05–14
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................................ 15–25
**ಲೇಖನಗಳು :**
ಬಡ್ಡಿಯೇತರ ಆದಾಯಗಳ ನಿರ್ವಹಣೆ (ನಾನ್‌ಫಂಡ್ ಬ್ಯುಸಿನೆಸ್) ....................... 26
ಒದುಗರಿಗೊಂದು ಸಹಕಾರ ಸಂಘ ........................................................ 27–28
ಕೋಪ್ ಕಿಚನ್ : ಮಹಿಳಾ ಆಧಾರಿತ ಸಹಕಾರಿ ಉದ್ಯಮಶೀಲತೆಯ ಹೊಸ ಮಾದರಿ ... 29–32
ಸಣ್ಣ ಅಭ್ಯಾಸಗಳು ದೊಡ್ಡ ಬದಲಾವಣೆಗಳು ........................................................ 33–34

# ಸಂಪಾದಕೀಯ

## ಆಡಳಿತ – ಅಭಿವೃದ್ಧಿ – ಆಂತರಿಕ ಸಂಬಂಧಗಳ ನಿರ್ವಹಣೆ

ಸಹಕಾರಿ ಸಂಸ್ಥೆಗಳು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು. ಒಂದು ವಿಧದಲ್ಲಿ ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯ ತರಬೇತಿ ಸಹಕಾರ ಸಂಸ್ಥೆಗಳಿಂದ ಪಡೆಯಬಹುದು. ಅರಿತ ಸದಸ್ಯ ನುರಿತ ಆಡಳಿತ ಮಂಡಳಿ ದಕ್ಷ ಸಿಬ್ಬಂದಿ ಒಂದು ಸಂಸ್ಥೆಯ ಅಭಿವೃದ್ಧಿ ಕಾರಣರಾಗುತ್ತಾರೆ. ಸಹಕಾರ ಸಂಸ್ಥೆಯ ಆಡಳಿತದಲ್ಲಿ ಅಂತಿಮ ಅಧಿಕಾರ ಸರ್ವ ಸದಸ್ಯರಿಗೆ ಆದರೂ ಅದನ್ನು ಪರಿಣಾಮಕಾರಿಯಾಗಿ ಜಾರಿ ಮಾಡಿ ಅಭಿವೃದ್ಧಿಯತ್ತ ಸಾಗಿಸುವುದು ಆಡಳಿತ ಮಂಡಳಿಯ ಜವಾಬ್ದಾರಿ.

ಆಡಳಿತಗಾರರು ಎಲ್ಲ ವಿಷಯದಲ್ಲೂ ಪರಿಣಿತಿಯನ್ನು ಪಡೆಯಲು ಸಾಧ್ಯವಾಗದಿರಬಹುದು. ಆದರೆ ಅಧಿಕಾರಿಗಳ ಹಿರಿಯರ, ತಜ್ಞರ, ಮಾರ್ಗದರ್ಶನ ಪಡೆದು ಕಾರ್ಯನಿರ್ವಹಿಸಲು ಸಾಧ್ಯ. ಆಡಳಿತ ತತ್ವಗಳು ಸಹಕಾರಿ ತತ್ವಗಳು, ಸಹಕಾರಿಯ ಧ್ಯೇಯೋದ್ದೇಶಗಳು, ಸಹಕಾರಿ ಕಾನೂನುಗಳು, ನಿಯಮಗಳು ಸಹಕಾರಿಯ ಉಪವಿಧಿಗಳು ಮತ್ತು ಪ್ರಚಲಿತ ವಿಷಯಗಳನ್ನು ಅಧ್ಯಯನ ಮಾಡುವ ಪ್ರವೃತ್ತಿಯನ್ನು ಆಡಳಿತಗಾರರು ಬೆಳೆಸಿಕೊಂಡು ಎಲ್ಲ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸಬೇಕಾಗುತ್ತದೆ. ಅಧ್ಯಕ್ಷರು, ನಿರ್ದೇಶಕರುಗಳು, ಸದಸ್ಯರು ಉತ್ತಮವಾಗಿ ಅಂತ–ರಿಕ ಸಂಬಂಧವನ್ನು ಹೊಂದಿರಬೇಕಾಗುತ್ತದೆ. ಆಡಳಿತ ವಿಷಯದಲ್ಲಿ ಅವಲಂಬನೆ ಸಲ್ಲದು. ಎಲ್ಲರ ಸಲಹೆ ಪಡೆದು ಸಹಕಾರಿಯ ಹಿತಕ್ಕೆ ಬಾಧೆಯಾಗದ ರೀತಿಯಲ್ಲಿ ನಿರ್ಣಯಗಳಾಗಬೇಕು ನಿರ್ಣಯಗಳು ಕಾರ್ಯರೂಪಕ್ಕೆ ಬರಬೇಕು. ಆಗ ಮಾತ್ರ ಅಭಿವೃದ್ಧಿಯನ್ನು ಕಾಣಬಹುದು.

ಆಡಳತ ವಿಷಯದಲ್ಲಿ ಸರ್ವ ಸದಸ್ಯರ ಸಭೆ – ಆಡಳಿತ ಮಂಡಳಿ – ಅಧ್ಯಕ್ಷರು – ವ್ಯವಸ್ಥಾಪಕ ನಿರ್ದೇಶಕರು ಮತ್ತು ಅವರ ಅಧೀನ ಸಿಬ್ಬಂದಿಯವರುಗಳ ಉತ್ತಮ ಆಂತರಿಕ ಸಂಬಂಧಗಳ ನಿರ್ವಹಣೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯ.

ಅಭಿವೃದ್ಧಿ ಸ್ವಾಭಾವಿಕ, ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳ ಸದ್ಬಳಕೆಯ ಮೇಲೆ ಅವಲಂಬಿತವಾಗುತ್ತದೆ. ಸಂಪನ್ಮೂಲಗಳ ಸದ್ಬಳಕೆ ವಿಷಯದಲ್ಲಿ ಲಾಭದಾಯಕ ಹೂಡಿಕೆಗಳಾಗಬಹುದು, ಗುಣಾತ್ಮಕ ಸಾಲ ನೀಡುವಿಕೆ ಇರಬಹುದು ಮತ್ತು ಉತ್ತಮ ವ್ಯವಹಾರ ಅಭಿವೃದ್ಧಿ ಯೋಜನೆಗಳಿರಬಹುದು ಎಲ್ಲವನ್ನು ವ್ಯವಸ್ಥಿತವಾಗಿ ಮಾಡಬೇಕು. ಆರ್ಥಿಕ ಸಂಪನ್ಮೂಲಗಳನ್ನು ಸಂಗ್ರಹಿಸುವುದು ಕಡಿಮೆ ಬಡ್ಡಿದರದ ಬಂಡವಾಳ ಶೇಖರಣೆಗೆ ಆದ್ಯತೆ, ಸಹಕಾರಿಯಲ್ಲಿ ಆಗುತ್ತಿರುವ ನಷ್ಟವನ್ನು ತಡೆಗಟ್ಟುವುದು, ಹೊಸ ಹೊಸ ವ್ಯವಹಾರಗಳನ್ನು ಪ್ರಾರಂಭಿಸುವುದು ಪ್ರಮುಖವೆನಿಸುತ್ತವೆ. ಇವುಗಳ ಜೊತೆಗೆ ಮಾನವ ಸಂಪನ್ಮೂಲಗಳ ಸದ್ಬಳಕೆ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಎಲ್ಲ ವಿಷಯಗಳನ್ನು ಆಡಳಿತ ಮಂಡಳಿಯರು ಗಮನಿಸಿ ಎಲ್ಲರ ಜೊತೆಗೆ ಉತ್ತಮ ಬಾಂಧವ್ಯಗಳನ್ನು ಹೊಂದಿ ಸಹಕಾರಿಯನ್ನು ಅಭಿವೃದ್ಧಿಯ ಕಡೆಗೆ ತೆಗೆದುಕೊಂಡು ಹೋಗುವ ಜವಾಬ್ದಾರಿ ಆಡಳಿತ ಮಂಡಳಿಯವರದ್ದಾಗಿದೆ. ಆಡಳಿತ ಮಂಡಳಿಯವರು ಹೆಚ್ಚು ವಿಷಯಗಳನ್ನು ಅಧ್ಯಯನ ಮಾಡಿ ಪೂರಕ ಅಭಿವೃದ್ಧಿ ಪರ ಚಿಂತನೆ ಮಾಡಿ ಸಹಕಾರಿಯನ್ನು ಅಭಿವೃದ್ಧಿ ಪಥದತ್ತ ಸಾಗಿಸಲು ಕ್ರಮ ವಿಡುವುದು ಅಗತ್ಯ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

### "ನಿಷ್ಠೆ"

ನಮ್ಮ ಜೀವನದ ಸಾಧನೆ ಅಥವಾ ಗಳಿಕೆ ಎಲ್ಲವೂ ನಮ್ಮ ಮನಸ್ಸನ್ನು ಅವಲಂಬಿಸಿದೆ. ನಮ್ಮ ಮನಸ್ಸು ಎಷ್ಟು ಶುದ್ಧವಾಗುತ್ತದೆಯೋ, ಸಶಕ್ತವಾಗುತ್ತದೆಯೊ ಅಷ್ಟು ನಮ್ಮ ಜೀವನವು ಸಮೃದ್ಧವಾಗುತ್ತದೆ. ನಮ್ಮ ಮನಸ್ಸನ್ನು ನಾವು ಹೇಗೆ ಬೆಳೆಸುತ್ತೇವೆಯೋ ಹಾಗೆ ಅದು ರೂಪು ತಳೆಯುತ್ತದೆ. ಹೂದೋಟವನ್ನು ನೋಡಿದಾಗ ಮನಸ್ಸು ಸುಗಂಧಿತವಾಗುತ್ತದೆ. ತಿಪ್ಪೆಯನ್ನು ನೋಡಿದಾಗ ಅದು ದುರ್ಗಂಧಿತವಾಗುತ್ತದೆ.

ಪ್ರಕ್ಷುಬ್ಧ ಅಥವಾ ಮಲಿನ ಮನದಿಂದ ಪ್ರಶಾಂತಿಯು ಎಂದೂ ದೊರೆಯುವುದಿಲ್ಲ. ಆದರೆ ಮನಸ್ಸು ನಿರ್ಮಲವೂ, ನಿಶ್ಚಲವೂ ಆದಾಗ ನಮ್ಮ ಜೀವನದಲ್ಲಿ ಪ್ರಶಾಂತಿಯು ಸಹಜವಾಗಿ ನೆಲಸುತ್ತದೆ. ಕಲಾವಿದನ ಕೈ ನಡುಗಿದರೆ ಚಿತ್ರ ಬರೆಯುವುದು ಹೇಗೆ ಸಾಧ್ಯ? ಅದೇ ರೀತಿ ಸಾಧಕನ ಮನಸ್ಸು ಚಂಚಲಿಸಿದರೆ ಜೀವನದ ಸುಂದರ ಚಿತ್ರವನ್ನು ಬರೆಯಲು ಸಾಧ್ಯವಾಗುವುದಾದರೂ ಹೇಗೆ?

ಸಾರ್ವಭೌಮರಾದ ರಾಜ, ಮಹಾರಾಜರಿಗೂ ಕೂಡಾ ತಮ್ಮ ಜೀವನದ ಸುಂದರ ಸುಲಭ ಚಿತ್ರ ಬರೆಯಲಿಕ್ಕೆ ಆಗಲಿಲ್ಲ. ಖಡ್ಗವನ್ನು ಕೈಯಲ್ಲಿ ಹಿಡಿದ ತಮ್ಮ ಜೀವನದ ಚಿತ್ರವನ್ನು ಬರಯಲಿಕ್ಕೆ ಹೋದ ರಾಜ–ಮಹಾರಾಜರು ತಾವೇ ಖಡ್ಗಕ್ಕೆ ಬಲಿಯಾದರೂ! ಬುದ್ಧ–ಬಸವ, ಮಹಾವೀರ–ಜ್ಞಾನೇಶ್ವರ ಮೊದಲಾದ ಮಹಾತ್ಮರು ತ್ಯಾಗ– ಯೋಗದಿಂದ ಎಂಥ ಸುಂದರವಾದ ಜೀವನಚಿತ್ರವನ್ನು ಬರೆದರು. ಆ ಮಹಾತ್ಮರು ಜನಸಾಮಾನ್ಯರ ಹೃದಯ ಗದ್ದುಗೆಯನೇರಿ ಆಧ್ಯಾತ್ಮಿಕ ಕ್ಷೇತ್ರದ ಅನಭಿಷಕ್ತ ದೊರೆಗಳೆನಿಸಿದರು. ಸಾವಿರಾರೂ ವರುಷಗಳಾದರೂ ಜಗತ್ತು ಅವರನ್ನು ನಿತ್ಯ ನೆನೆಯುತ್ತಿದೆ. ಅದೇ ರೀತಿ ಮೀರಾ, ಅಕ್ಕಮಹಾದೇವಿ ಮೊದಲಾದ ಶಿವಶರಣೆಯರು ಕೂಡಾ ಈ ಪ್ರಪಂಚವು ಎಂದೂ ಮರೆಯಲಾರದಂಥ ಸುಂದರ ಜೀವನ ಚಿತ್ರ ಬರೆದು. ಅರಿಸ್ಟಾಟಲ್, ಡಯೋಜಿನ್ಸ್, ಲಾವೋತ್ಸೆ ಮೊದಲಾದ ವಿದೇಶಿಯ ಸಂತರೂ ಕೂಡಾ ಸುಂದರ ಜೀವನ ಚಿತ್ರ ಬರೆದು ವಿಶ್ವಮಾನ್ಯರೆನಿಸಿದರು

ಶ್ರದ್ಧೆಯಿಂದ ನಮ್ಮ ಮನಸ್ಸು ಸಶಕ್ತವೂ ಸುನಿರ್ಮಲವೂ ಆಗುತ್ತದೆ. ಈ ಶ್ರದ್ಧೆ ಉಳ್ಳವರನ್ನು ಶ್ರದ್ಧೇಯರು, ಶ್ರದ್ಧಾಳುಗಳು ಎಂದು ಕರೆಯುತ್ತಾರೆ. ಶ್ರದ್ಧೇಯರು ಎಂದರೆ ನಂಬಿಗೆಯನ್ನು ಇಡಲು ಅರ್ಹರಾದವರು. ಗೌರವಾನ್ವಿತರು ಹಿರಿಯರು ಎಂದರ್ಥ. ಜೀವನದಲ್ಲಿ ನಮಗೆ ಹಿರಿತನವು ಸಂಪತ್ತಿನಿಂದ, ಶಕ್ತಿಯಿಂದ ಬರುವುದಿಲ್ಲ. ಆದರೆ ಪ್ರಮಾಣಿಕತೆ ಮತ್ತು ವಿಧೇಯತೆ ಅಥವಾ ಅಜ್ಞಾಪಾಲನೆಯಿಂದ ಬರುತ್ತದೆ. ಅದನ್ನೇ ಶ್ರದ್ಧೆ ಎನ್ನುತ್ತಾರೆ.

ನಮ್ಮಲ್ಲಿ, ನಮ್ಮ ಹಿತೈಷಿಗಳಲ್ಲಿ, ಜಗತ್ತಿನಲ್ಲಿ ಜಗದೀಶನಲ್ಲಿ ನಾವು ಶ್ರದ್ಧೆಯನ್ನು ಇಡಬೇಕಾಗುತ್ತದೆ. ಜಗದೀಶನಲ್ಲಿ ಎಂದರೆ ಪರಮಸತ್ಯ ಪರಮಾತ್ಮನದಲ್ಲಿ ಶ್ರದ್ಧೆ ಉಳ್ಳವರೇ ಸಂತರು, ಶರಣರು, ಮಹಾತ್ಮರು ಎನಿಸುತ್ತಾರೆ.

ಈ ವಿಶಾಲದಲ್ಲಿ ಪ್ರಪಂಚವೆಲ್ಲವೂ ಯಾರ ಅಭಿವ್ಯಕ್ತಿಯಾಗಿದೆಯೋ ಅವನೇ ಪರಮಸತ್ಯ ಪರಮಾತ್ಮನು. "ಅತ್ಯ ತಿಷ್ಠತ್ ದಶಾಂಗುಲಂ" ಎಂದರೆ ಆ ಪರಮಾತ್ಮನು ಈ ವಿಶ್ವವನ್ನೂ ಮೀರಿ ದಶದಿಕ್ಕುಗಳನ್ನೆಲ್ಲ ವ್ಯಾಪಿಸಿರುವವನು. ಆ ಮಹಾದೇವನ ಎದುರು ಈ ಭೂಮಿ ಆ ರವಿ, ಶಶಿ, ತಾರೆಗಳೆಲ್ಲವೂ ನಗಣ್ಯ ಅಥವಾ ಶೂನ್ಯ ಸ್ಥಾನವನ್ನು ಪಡೆಯುತ್ತವೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಜನವರಿ–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 940 | 405 | 407 | 184 | 1936 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 83 | 104 | 131 | 80 | 398 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 77 | 53 | 72 | 64 | 266 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 946 | 456 | 466 | 200 | 2068 |
| ಜನವರಿ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 398 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 266 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7511 | 1318 | 2240 | 792 | 11899 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1084 | 255 | 550 | 199 | 2088 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6427 | 1101 | 1690 | 593 | 9811 |
| ಜನವರಿ 2026ರ ತಿಂಗಳಿನಲ್ಲಿ ಒಟ್ಟು 162 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# ಬಜೆಟ್ 2026-27; ವಿಕಸಿತ ಭಾರತದ ನಿರ್ಮಾಣಕ್ಕೆ ಭದ್ರ ಅಡಿಪಾಯ

## - ಶ್ರೀ ನರೇಂದ್ರ ಮೋದಿ, ಮಾನ್ಯ ಪ್ರಧಾನಮಂತ್ರಿಗಳು, ಭಾರತ ಸರ್ಕಾರ.



**ನವದೆಹಲಿ :** ಮಂಡನೆಯಾದ 2026–27ನೇ ಸಾಲಿನ ಕೇಂದ್ರ ಬಜೆಟ್ ಅನ್ನು ಐತಿಹಾಸಿಕ ಎಂದು ಬಣ್ಣಿಸಿರುವ ಪ್ರಧಾನಿ ನರೇಂದ್ರ ಮೋದಿ ಇದು 140 ಕೋಟಿ ಭಾರತೀಯರ ಆಕಾಂಕ್ಷೆಗಳ ಪ್ರತಿಬಿಂಬವಾಗಿದೆ ಎಂದು ಶ್ಲಾಘಿಸಿದ್ದಾರೆ. ಈ ಬಜೆಟ್ ಭಾರತವನ್ನು ವಿಕಸಿತ ಭಾರತ 2047 ರ ಗುರಿಯತ್ತ ಕೊಂಡೊಯ್ಯುವ ಸ್ಪಷ್ಟ ಮಾರ್ಗಸೂಚಿಯನ್ನು ಹೊಂದಿದೆ ಎಂದು ಹೇಳಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಸತತ 9ನೇ ಬಾರಿಗೆ ಬಜೆಟ್ ಮಂಡಿಸಿ ಹೊಸ ದಾಖಲೆ ಬರೆದ ನಂತರ, ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ಈ ಬಜೆಟ್ ಅವಕಾಶಗಳ ಹೆದ್ದಾರಿ ಎಂದು ಕರೆದಿದ್ದಾರೆ.

### 140 ಕೋಟಿ ಜನರ ಆಕಾಂಕ್ಷೆಗಳ ಬಜೆಟ್ :

ಬಜೆಟ್ ಭಾರತದ ಸುಧಾರಣಾ ಪಯಣವನ್ನು ಬಲಪಡಿಸುತ್ತದೆ. ಇದು ಕೇವಲ ಅಂಕಿ–ಅಂಶಗಳ ದಾಖಲೆಯಲ್ಲ, ಬದಲಿಗೆ 140 ಕೋಟಿ ಭಾರತೀಯರ ಕನಸುಗಳನ್ನು ನನಸು ಮಾಡುವ ಭರವಸೆಯಾಗಿದೆ. ಭಾರತವು ಇಂದು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿರುವುದಕ್ಕೆ ನಾವು ತೃಪ್ತರಾಗಿ ಕುಳಿತಿಲ್ಲ. ನಾವು ಶೀಘ್ರದಲ್ಲೇ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಬೇಕು ಎಂಬುದು ನಮ್ಮ ಸಂಕಲ್ಪ ಎಂದು ಮೋದಿ ಘೋಷಿಸಿದ್ದಾರೆ.

### ಮಹಿಳಾ ಶಕ್ತಿ ಮತ್ತು ಸಬಲೀಕರಣ :

ನಮ್ಮ ದೇಶದ ನಾರೀಶಕ್ತಿಯ ಸಬಲೀಕರಣಕ್ಕೆ ಈ ಬಜೆಟ್ ಹೊಸ ಶಕ್ತಿ ನೀಡಿದೆ. ನಿರ್ಮಲಾ ಸೀತಾರಾಮನ್ ಅವರು ಸತತ 9ನೇ ಬಾರಿಗೆ ಬಜೆಟ್ ಮಂಡಿಸುವ ಮೂಲಕ ಭಾರತೀಯ ಮಹಿಳೆಯರ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದ್ದಾರೆ ಎಂದರು.

### ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತಕ್ಕೆ ಹೊಸ ವೇಗ :

ಈ ಬಜೆಟ್ ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಅಭಿಯಾನಕ್ಕೆ ಹೊಸ ಆಯಾಮ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

### MSME ವಲಯ:

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೀಡಲಾಗಿರುವ ಬಲವಾದ ಬೆಂಬಲವು ಅವುಗಳನ್ನು ಸ್ಥಳೀಯ ಮಟ್ಟದಿಂದ ಜಾಗತಿಕ ಮಟ್ಟಕ್ಕೆ ಬೆಳೆಯಲು ಸಹಾಯ ಮಾಡುತ್ತದೆ.

### ಆರ್ಥಿಕ ಸಮತೋಲನ ಮತ್ತು ಸುಧಾರಣೆ :

ಬಜೆಟ್‌ನ ಆರ್ಥಿಕ ಶಿಸ್ತನ್ನು ವಿಶೇಷವಾಗಿ ಮೆಚ್ಚಿಕೊಂಡಿದ್ದಾರೆ.

### ಹಣದುಬ್ಬರ ನಿಯಂತ್ರಣ:

ಬೆಲೆ ಏರಿಕೆಯನ್ನು ಹತೋಟಿಯಲ್ಲಿಡಲು ಬಜೆಟ್‌ನಲ್ಲಿ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

### ವಿತ್ತೀಯ ಕೊರತೆ:

ದೇಶದ ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವ ಜೊತೆಗೆ, ಮೂಲ ಸೌಕರ್ಯ ಅಭಿವೃದ್ಧಿಗೆ ದಾಖಲೆ ಪ್ರಮಾಣದ ಹಣವನ್ನು ಮೀಸಲಿಡಲಾಗಿದೆ.

### ಸುಧಾರಣಾ ಎಕ್ಸ್‌ಪ್ರೆಸ್‌ಗೆ ಹೊಸ ವೇಗ

ಈ ವರ್ಷದ ಬಜೆಟ್ ನಮ್ಮ ಸುಧಾರಣಾ ಎಕ್ಸ್‌ಪ್ರೆಸ್ ಗೆ ಹೊಸ ಇಂಧನ ಮತ್ತು ಹೊಸ ವೇಗವನ್ನು ನೀಡುತ್ತದೆ.

ಕೇಂದ್ರ ಸರ್ಕಾರದ ರಿಫಾರ್ಮ್ ಎಕ್ಸ್‌ಪ್ರೆಸ್ ಈಗ ಹೊಸ ಶಕ್ತಿಯೊಂದಿಗೆ ಮುನ್ನುಗ್ಗುತ್ತಿದೆ. ಇದು ತಂತ್ರಜ್ಞಾನ, ಮೂಲಸೌಕರ್ಯ ಮತ್ತು ಡಿಜಿಟಲ್ ಇಂಡಿಯಾದ ಕನಸನ್ನು ನನಸು ಮಾಡಲಿದೆ. ಹಳ್ಳಿಗಳಿಂದ ನಗರಗಳವರೆಗೆ ಎಲ್ಲೂ ತಾರತಮ್ಯವಿಲ್ಲದ ಅಭಿವೃದ್ಧಿಯನ್ನು ಈ ಬಜೆಟ್ ಖಚಿತಪಡಿಸಿದೆ.

### ಸಮತೋಲಿತ ಆರ್ಥಿಕ ಚೌಕಟ್ಟು

ಭಾರತದ ಆರ್ಥಿಕತೆಯು ಮಾನವ ಕೇಂದ್ರಿತ ಅಭಿವೃದ್ಧಿಯ ಮೇಲೆ ನಿಂತಿದೆ ವಿಶ್ವಾಸಾರ್ಹ ಆಡಳಿತ ಮತ್ತು ಮಾನವ ಕೇಂದ್ರಿತ ಆರ್ಥಿಕ ಚೌಕಟ್ಟನ್ನು ಈ ಬಜೆಟ್ ಒಳಗೊಂಡಿದೆ. ಹಣದುಬ್ಬರವನ್ನು ಹತೋಟಿಯಲ್ಲಿಟ್ಟುಕೊಂಡು, ವಿತ್ತೀಯ ಕೊರತೆಯನ್ನು ಕಡಿಮೆ ಮಾಡುವುದು ಮತ್ತು ಮೂಲಸೌಕರ್ಯಕ್ಕೆ ಹೆಚ್ಚಿನ ಬಂಡವಾಳ ಹೂಡುವುದರ ನಡುವೆ ಅದ್ಭುತ ಸಮತೋಲನವನ್ನು ಸಾಧಿಸಲಾಗಿದೆ.

### ಸ್ಮಾರ್ಟ್ ನಗರಗಳು ಮತ್ತು ಆಧುನಿಕ ಮೂಲಸೌಕರ್ಯ

ಸಂಪರ್ಕ ಮತ್ತು ಮೂಲಸೌಕರ್ಯ ಕುರಿತಂತೆ ಈ ಬಜೆಟ್ ದೇಶದ ಪ್ರತಿ ನಗರವನ್ನು ವಾಸಯೋಗ್ಯ ಮತ್ತು ಸ್ಮಾರ್ಟ್ ಮಾಡುವ ನಿಟ್ಟಿನಲ್ಲಿ ದೊಡ್ಡ ಹೆಜ್ಜೆಯಾಗಿದೆ. ಇದು ಭಾರತದ ಭವಿಷ್ಯದ ಪೀಳಿಗೆಗೆ ಆಧುನಿಕ ಸೌಲಭ್ಯಗಳನ್ನು ಖಚಿತಪಡಿಸುತ್ತದೆ ಎಂದರು.

### ಸಾರಾಂಶ

ಪ್ರಧಾನಿ ನರೇಂದ್ರ ಮೋದಿ ಅವರ ಪ್ರಕಾರ, 2026–27ರ ಬಜೆಟ್ ಕೇವಲ ಒಂದು ವರ್ಷದ ಯೋಜನೆಯಲ್ಲ, ಇದು 2047ರ ಹೊತ್ತಿಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಸುದೀರ್ಘ ಪಯಣ ಬಲವಾದ ಅಡಿಪಾಯವಾಗಿದೆ. ಉದ್ಯೋಗ ಸೃಷ್ಟಿ, ಡಿಜಿಟಲ್ ಮೂಲಸೌಕರ್ಯ ಮತ್ತು ಹಸಿರು ಇಂಧನದ ಮೇಲೆ ಈ ಬಜೆಟ್ ನೀಡಿರುವ ಒತ್ತು ಜಾಗತಿಕ ಮಟ್ಟದಲ್ಲಿ ಭಾರತದ ಸ್ಥಾನಮಾನವನ್ನು ಮತ್ತಷ್ಟು ಎತ್ತರಿಸಲಿದೆ.

## ಕೇಂದ್ರ ಬಜೆಟ್ 2026 : ಗ್ರಾಮೀಣ ಮಹಿಳೆಯರ ಉದ್ಯಮಗಳಿಗೆ ಉತ್ತೇಜನ 'SHE-MART' ಆರಂಭ

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಮ್ಮ ಒಂಬತ್ತನೇ ಬಜೆಟ್ ಗ್ರಾಮೀಣ ಮಹಿಳೆಯರಿಗಾಗಿ ಗುಡ್‌ನ್ಯೂಸ್ ನೀಡಿದ್ದಾರೆ. ಗ್ರಾಮೀಣ ಮಹಿಳೆಯರು ನಡೆಸುವ, ಸ್ವ–ಸಹಾಯ ಉದ್ಯಮಗಳಿಗೆ ಶಿ–ಮಾರ್ಟ್‌ಗಳನ್ನು ಪ್ರಾರಂಭಿಸಲಾಗುವುದು. ಇದು ಮಹಿಳೆಯರ ಸಬಲೀಕರಣ ಮಾಡಲು ಸಹಾಯಕವಾಗಿದೆ. ಇದು ಸ್ವ–ಸಹಾಯ ಉದ್ಯಮಿಗಳಿಂದ ನಡೆಸಲ್ಪಡುವ ಮತ್ತು ಸಮುದಾಯದ ಒಡೆತನದ ಚಿಲ್ಲರೆ ಮಾರಾಟ ಮಳಿಗೆಗಳಾಗಿ ಕಾರ್ಯನಿರ್ವಹಿಸುತ್ತದೆ. ಮಹಿಳೆಯರು ಸಾಲ ಆಧಾರಿತ ಜೀವನೋಪಾಯದಿಂದ ತಮ್ಮದೇ ಆದ ಉದ್ಯಮಗಳ ಮಾಲೀಕರಾಗಲು ಸಹಾಯ ಮಾಡಲು ಸರ್ಕಾರ ಬಯಸುತ್ತದೆ.

## "ಸಹಕಾರ ಕ್ಷೇತ್ರ - ಕೇಂದ್ರ ಬಜೆಟ್"

2026–27ನೇ ಕೇಂದ್ರ ಬಜೆಟ್‌ನಲ್ಲಿ ಸಹಕಾರಕ್ಕೆ ಹೆಚ್ಚಿನ ಮಾನ್ಯತೆ ದೊರೆತಿದೆ. 2025–26ನೇ ಸಾಲಿನಲ್ಲಿ ರೂ. 1,186.29 ಕೋಟಿ ತೆಗೆದಿಡಲಾಗಿತ್ತು. ಪ್ರಸ್ತ ಸಾಲಿನಲ್ಲಿ ಈ ಮೊತ್ತವನ್ನು ರೂ. 1,744.44 ಕೋಟಿಗೆ ಹೆಚ್ಚಿಸಲಾಗಿದೆ. ಬಜೆಟ್‌ನಲ್ಲಿ ಸಹಕಾರ ಕ್ಷೇತ್ರಕ್ಕೆ ಕಲ್ಪಿಸಿದ ಅವಕಾಶಗಳಿಂದಾಗಿ ಸಹಕಾರ ಕ್ಷೇತ್ರಕ್ಕೆ ಗರಿ ಬಂದಂತಾಗಿದೆ. ಆರ್ಥಿಕ ಪ್ರಗತಿಗೆ ಹೆಚ್ಚು ಒತ್ತು ಕೊಡುವುದರ ಜೊತೆಗೆ ಸಹಕಾರಿ ಸಂಸ್ಥೆಗಳನ್ನು ಭಾರತದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನೀಡಿದಂತಾಗಿದೆ. ಸಹಕಾರ ಶಿಕ್ಷಣಕ್ಕಾಗಿಯೇ 300 ಕೋಟಿಗಳನ್ನು ಒದಗಿಸಲಾಗಿದೆ.

## ಮಹಿಳಾ ಸಹಕಾರಿಗಳ ಭೇಟಿ



**ಬೆಂಗಳೂರು** : Centre for Industrial Co-operatives of Producer's & Artisans (CICOPA) ಸಂಸ್ಥೆಯ ನೇತೃತ್ವದಲ್ಲಿ ರಾಜ್ಯದ ಮಹಿಳಾ ಸಹಕಾರಿ ಸಂಘಗಳ ಅಧ್ಯಕ್ಷರು, ನಿರ್ದೇಶಕರುಗಳು ಸಂಯುಕ್ತ ಸಹಕಾರಿಗೆ ಅಧ್ಯಯನ ಪ್ರವಾಸದ ಕಾರ್ಯಕ್ರಮದ ಅಂಗವಾಗಿ ಭೇಟಿ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ಹಿರಿಯ ಮಹಿಳಾ ಸಹಕಾರಿ ಶ್ರೀಮತಿ ಲೀಲಾವತಿ. ಆರ್. ಪ್ರಸಾದ್‌ರವರು, ಮಹಿಳಾ ಸಹಕಾರಿ ಬ್ಯಾಂಕ್, ಚನ್ನಪಟ್ಟಣದ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮೀ ರಾಮಣ್ಣ, ಶ್ರೀಮತಿ ರಾಜಲಕ್ಷ್ಮಿ, ಶ್ರೀಮತಿ ಎಸ್.ಕೆ ನಾಗರತ್ನರಾವ್, ವ್ಯವಸ್ಥಾಪಕ ನಿರ್ದೇಶಕರು, ಸಿಕೋಪಾ ಸಂಸ್ಥೆ, ಬೆಂಗಳೂರು ಇವರು ಸೇರಿದಂತೆ ರಾಜ್ಯದ ವಿವಿಧ ಸಹಕಾರಿ ಸಂಸ್ಥೆಗಳಿಂದ 41 ಮಹಿಳಾ ಸಹಕಾರಿಗಳು ಭಾಗವಹಿಸಿದರು.

ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ 01.01.2001 ರಿಂದ ಪ್ರಾರಂಭವಾಗಿದೆ. ಈ ಕಾಯ್ದೆ ಪ್ರಾರಂಭದ ಹಿನ್ನಲೆ, ನಂತರ ಸಂಯುಕ್ತ ಸಹಕಾರಿಯ ಪ್ರಾರಂಭ ಹಾಗೂ ಸೌಹಾರ್ದ ಸಹಕಾರಿ ಧ್ಯೇಯ, ದೃಷ್ಟಿ ಮತ್ತು ಮೌಲ್ಯಗಳು ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿ ವಿವರಗಳನ್ನು ನೀಡಿದರು ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಾಕ್ಷಚಿತ್ರವನ್ನು ತೋರಿಸಲಾಯಿತು.

ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದ ಶ್ರೀಮತಿ ಲೀಲಾವತಿ ಪ್ರಸಾದ್‌ರವರು ಸಹಕಾರ ಕ್ಷೇತ್ರದಲ್ಲಿ ಇದೊಂದು ಉತ್ತಮ ಬೆಳವಣಿಗೆ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಹಕಾರಿ ಪ್ರೋತ್ಸಾಹ ನೀಡಬೇಕು, ಹತೋಟಿ ಇರಬಾರದು, ಸ್ವಾಯತ್ತತೆ ಅಗತ್ಯ ಎಂದು ತಿಳಿಸಿದರು.

ಶ್ರೀಮತಿ ಎಸ್.ಕೆ ನಾಗರತ್ನರವರು ಮಾತನಾಡಿ ಸಹಕಾರ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಕಾರ್ಯಚಟುವಟಿಕೆಗಳು ಸಂತೋಷದಾಯಕವೆಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀಮತಿ ಕವಿತಾ ರವರು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ಪಟ್ಟಣ ಸಹಕಾರಿ ಬ್ಯಾಂಕುಗಳ ಅಧ್ಯಕ್ಷರು, ಪದಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳಿಗಾಗಿ ಉನ್ನತ ಮಟ್ಟದ ತರಬೇತಿ
2. 50 ಕೋಟಿ ಅಧಿಕ ಬಂಡವಾಳದ ಸೌಹಾರ್ದ ಸಹಕಾರಿಗಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ (ರಾಜ್ಯ ಮಟ್ಟ) – 2
3. ಅಧಿಕ ಬಂಡವಾಳವಿರುವ ಸೌಹಾರ್ದ ಸಹಕಾರಿಗಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ (ಪ್ರಾಂತೀಯ ಮಟ್ಟ) – 4
4. ಸಂಯುಕ್ತ ಸಹಕಾರಿಯ ಹಿರಿಯ ಅಧಿಕಾರಿಗಳಿಗೆ ಕಾರ್ಯದಕ್ಷತೆ ಅಭಿವೃದ್ಧಿ ತರಬೇತಿ
5. ಕಿರಿಯ ಅಧಿಕಾರಿಗಳಿಗೆ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ
6. ಪತ್ತೇತರ ಸೌಹಾರ್ದ ಸಹಕಾರಿಗಳಿಗಾಗಿ ವ್ಯಾಪಾರ ಅಭಿವೃದ್ಧಿ ತರಬೇತಿ

# ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2025-26ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಗಳು



**ಬಾಗಲಕೋಟೆ** : ದಿನಾಂಕ 23.12.2025 ಮಂಗಳವಾರದಂದು ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಸಾಯಿ ಮಂದಿರ, ವಿದ್ಯಾಗಿರಿ, ಬಾಗಲಕೋಟೆ ಇಲ್ಲಿ ಜರುಗಿಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಂ.ಎಸ್.ದಡ್ಡೆಣ್ಣವರ, ಅಧ್ಯಕ್ಷರು ಶಿವಶಕ್ತಿ ಸೌಹಾರ್ದ ಸಹಕಾರಿ ನಿ, ಬಾಗಲಕೋಟೆ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್. ಪಾಟೀಲ್ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ಮಲ್ಲಯ್ಯ ಕಂಬಿ, ಅಧ್ಯಕ್ಷರು ವಾರಿ ಮಲ್ಲಿಕಾರ್ಜುನ ಸೌ. ಸ. ನಿ, ಶ್ರೀ ಆರ್.ಬಿ.ಕುರ್ತಕೋಟಿ, ಮುಖ್ಯಕಾರ್ಯನಿರ್ವಾಹಕರು ಬಾಗಲಕೋಟೆ ಬಸವಶ್ರೀ ಸೌಹಾರ್ದ ಸಹಕಾರಿ ನಿ, ಬಾಗಲಕೋಟೆ ಶ್ರೀ ಮಹೇಶ್ ಮಠಪತಿ, ಮುಖ್ಯಕಾರ್ಯನಿರ್ವಾಹಕರು ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ನಿ, ಜಮಖಂಡಿ, ಶ್ರೀ ಎಲ್. ಬಿ.ಪಠಾಣ್, ಅಧ್ಯಕ್ಷರು ನವಚೇತನ ಸೌಹಾರ್ದ ಸಹಕಾರಿ ನಿ, ಬಾದಾಮಿ ಇವರು ಆಗಮಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೆಂಕಟೇಶ್ ರಾಥೋಡ್ ಇವರು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಸೌಹಾರ್ದ ಕಾಯ್ದೆಯ ತಿದ್ದುಪಡಿಯ ಅಂಶಗಳ ಕುರಿತು ಮತ್ತು ಮುಖ್ಯಕಾರ್ಯನಿರ್ವಾಹಕರ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಹಣಮಂತ, ಅಧೀಕ್ಷಕರು ಸಹಕಾರ ಸಂಘಗಳ ಇಲಾಖೆ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀಮತಿ ರೇಷ್ಮಾ ಪಾಟೀಲ್ ಇವರು ನೆರವೇರಿಸಿದರು. ಕಾರ್ಯಕ್ರಮ ನಿರೂಪಣೆಯನ್ನು ಶ್ರೀ ಹಣಮಂತ, ಮುಖ್ಯಕಾರ್ಯನಿರ್ವಾಹಕರು, ಕುಲಹಳ್ಳಿ ರೈತರ ಮಿತ್ರ ಸೌ ಸ ನಿ ಇವರು ನೇರವೆರಿಸಿದರು. ಸಭೆಯಲ್ಲಿ 293 ಸೌಹಾರ್ದ ಸಹಕಾರಿಗಳಿಂದ 347 ಪ್ರತಿನಿಧಿಗಳು ಭಾಗವಹಿಸಿದ್ದರು.

---



**ವಿಜಯಪುರ** : ದಿನಾಂಕ 22.12.2025ರ ಸೋಮವಾರದಂದು ವಿಜಯಪುರ ಜಿಲ್ಲೆಯ ಆಲಮೇಲ, ದೇವರ ಹಿಪ್ಪರಗಿ, ಸಿಂದಗಿ ಹಾಗೂ ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರಿ ಸಂಘ ನಿ, ಬಂಜಾರ ಕ್ರಾಸ್, ಸೋಲಾಪೂರ ರೋಡ್, ಡಿ.ಸಿ.ಸಿ. ಬ್ಯಾಂಕ್ ಹತ್ತಿರ. ವಿಜಯಪುರ ಇಲ್ಲಿ ಜರುಗಿಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸುಭಾಷ ಭರ್ಮಾ, ಮಾನ್ಯ ಜಂಟಿ ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ವಿಜಯಪುರ, ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನರವರು ವಹಿಸಿದ್ದರು. ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಹಾಗೂ ಹಿರಿಯ ಸಹಕಾರಿಗಳಾದ ಶ್ರೀ ಅಮರನಾಥ ಬಿರಾದಾರ ಇವರುಗಳು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಸೌಹಾರ್ದ ಕಾಯ್ದೆಯ ತಿದ್ದುಪಡಿಯ ಅಂಶಗಳ ಕುರಿತು ಶ್ರೀ ಸುಭಾಷ ಇಂಡಿ ಇವರು ಮಾಹಿತಿ ನೀಡಿದರು. ಮುಖ್ಯಕಾರ್ಯನಿರ್ವಾಹಕರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ರವರು ಮಾಹಿತಿ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ಸ್ವಾಗತವನ್ನು ಸಹಾಯಕಿಯಾದ ಶ್ರೀಮತಿ ಪ್ರತಿಭಾ ಮಠ ಇವರು ನೆರವೇರಿಸಿದರು. ಸಭೆಯಲ್ಲಿ 145 ಸೌಹಾರ್ದ ಸಹಕಾರಿಗಳಿಂದ 164 ಪ್ರತಿನಿಧಿಗಳು ಭಾಗವಹಿಸಿದ್ದರು.

---



**ವಿಜಯಪುರ** : ದಿನಾಂಕ 23.12.2025 ಮಂಗಳವಾರದಂದು ವಿಜಯಪುರ ಜಿಲ್ಲೆಯ ಇಂಡಿ, ಚಡಚಣ, ಮುದ್ದೇಬಿಹಾಳ, ತಾಳಿಕೋಟ, ನಿಡಗುಂದಿ, ಬಬಲೇಶ್ವರ, ಬಸವನ ಬಾಗೇವಾಡಿ, ತಿಕೋಟಾ ಮತ್ತು ಕೋಲ್ಹಾರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಶಾಂತೇಶ್ವರ ವಿವಿಧ ಉದ್ದೇಶಗಳ ಸಹಕಾರಿ ಸಂಘ ನಿ, ಬಂಜಾರ ಕ್ರಾಸ್, ಸೋಲಾಪೂರ

ರೋಡ್, ಡಿ.ಸಿ.ಸಿ. ಬ್ಯಾಂಕ್ ಹತ್ತಿರ. ವಿಜಯಪುರ ಇಲ್ಲಿ ಜರುಗಿಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಸಹಕಾರಿಗಳಾದ ಶ್ರೀ ಅಮರನಾಥ ಬಿರಾದಾರ ಇವರು ನೆರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ ಶಂಕರಗೌಡ ಪಾಟೀಲ, ಅಧ್ಯಕ್ಷರು, ಯುವಸಿರಿ ಸೌಹಾರ್ದ ಸಹಕಾರಿ ಸಂಘ ನಿ., ಯರನಾಳ ಇವರು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸವರಾಜ ಎಸ್. ಇವರು ಪ್ರಾಸ್ತಾವಿಕ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು. ಸೌಹಾರ್ದ ಕಾಯ್ದೆಯ ತಿದ್ದುಪಡಿಯ ಅಂಶಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುಭಾಷ ಇಂಡಿ ಇವರು ಮಾಹಿತಿ ನೀಡಿದರು. ಮುಖ್ಯಕಾರ್ಯನಿರ್ವಾಹಕರ ಕರ್ತವ್ಯ ಮತ್ತು ಜವಾಬ್ದಾರಿ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ಬಸವರಾಜ ಎಸ್. ರವರು ಮಾಹಿತಿ ನೀಡಿದರು. ಕಾರ್ಯಕ್ರಮದ ನಿರೂಪಣೆ ಮತ್ತು ಸ್ವಾಗತವನ್ನು ಸಹಾಯಕಿಯಾದ ಶ್ರೀಮತಿ ಪ್ರತಿಭಾ ಮಠ ಇವರು ನೆರವೇರಿಸಿದರು. ಸಭೆಯಲ್ಲಿ 153 ಸೌಹಾರ್ದ ಸಹಕಾರಿಗಳಿಂದ 176 ಪ್ರತಿನಿಧಿಗಳು ಭಾಗವಹಿಸಿದ್ದರು



**ಬೆಳಗಾವಿ :** ದಿನಾಂಕ 12 ಜನವರಿ 2026 ರಂದು ಬೆಳಗಾವಿ ಜಿಲ್ಲೆಯ ಗೋಕಾಕ, ಮೂಡಲಗಿ, ಬೆಳಗಾವಿ ಮತ್ತು ಖಾನಾಪುರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ, ಮುಖ್ಯಕಾರ್ಯ ನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಮಹಾಂತ ಭವನ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಬೆಳಗಾವಿ ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣಗೊಳ ರವರು ನೆರವೇರಿಸಿದರು. ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಟಾಸ್ಕ್ ಫೋರ್ಸ್ ಅಧಿಕಾರಿಯಾದ ಶ್ರೀ ಗಂಗಾರಾಮ ಕೊಳಾಪ್ಪೆ ರವರು ಉಪಸ್ಥಿತರಿದ್ದರು.

ಮೊದಲನೆಯ ಅವಧಿಯಲ್ಲಿ ಕಲಂ 34 ರಡಿ ಮಾಹಿತಿ ಸಲ್ಲಿಕೆ, ಲೆಕ್ಕ ಪರಿಶೋಧನೆ ಅವಲೋಕನ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಸಂಯುಕ್ತ ಸಹಕಾರಿಗೆ ಸಲ್ಲಿಕೆಯಾಗದ ಮಾಹಿತಿ ಮತ್ತು ವರದಿಗಳ ಕುರಿತು, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ರಾಚಯ್ಯ ಹಿರೇಮಠ ಮಾಹಿತಿ ನೀಡಿದರು. ಎರಡನೇಯ ಅವಧಿಯಲ್ಲಿ ಸೌಹಾರ್ದ ಕಾಯ್ದೆ ತಿದ್ದುಪಡಿ ಕುರಿತು ಮತ್ತು ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗಂಗಾರಾಮ್ ಕೊಳಾಪ್ಪೆ ರವರು ಉಪನ್ಯಾಸ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ರಾಚಯ್ಯ ಹಿರೇಮಠ ರವರು ಕಾರ್ಯಕ್ರಮ ನಿರೂಪಿಸಿದರು. ಸಭೆಯಲ್ಲಿ 226 ಸೌಹಾರ್ದ ಸಹಕಾರಿಗಳಿಂದ 282 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 13 ಜನವರಿ 2026 ಮಂಗಳವಾರ ರಂದು ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಬೈಲಹೊಂಗಲ, ರಾಮದುರ್ಗ, ಸವದತ್ತಿ, ಚೆನ್ನಮ್ಮನ ಕಿತ್ತೂರ ಹಾಗೂ ಯರಗಟ್ಟಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ, ಮುಖ್ಯಕಾರ್ಯನಿರ್ವಾಹಕರ ವಾರ್ಷಿಕ ಸಭೆಯನ್ನು ಶ್ರೀ ಮಹಾಂತ ಭವನ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಬೆಳಗಾವಿ ವಿಭಾಗದ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣಗೊಳ ರವರು ನೆರವೇರಿಸಿದರು. ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಟಾಸ್ಕ್ ಫೋರ್ಸ್ ಅಧಿಕಾರಿಯಾದ ಶ್ರೀ ಗಂಗಾರಾಮ ಕೊಳಾಪ್ಪೆ ರವರು ಉಪಸ್ಥಿತರಿದ್ದರು.

ಮೊದಲನೇಯ ಅವದೀಯಲ್ಲಿ ಕಲಂ 34 ರಡಿ ಮಾಹಿತಿ ಸಲ್ಲಿಕೆ, ಲೆಕ್ಕ ಪರಿಶೋಧನೆ ಅವಲೋಕನ ವರದಿಯಲ್ಲಿ ಕಂಡುಬಂದ ನ್ಯೂನ್ಯತೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಕುರಿತು, ಸಂಯುಕ್ತ ಸಹಕಾರಿಗೆ ಸಲ್ಲಿಕೆಯಾಗದ ಮಾಹಿತಿ ಮತ್ತು ವರದಿಗಳ ಕುರಿತು, ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ರಾಚಯ್ಯ ಹಿರೇಮಠ ಮಾಹಿತಿ ನೀಡಿದರು. ಎರಡನೇಯ ಅವಧಿಯಲ್ಲಿ ಸೌಹಾರ್ದ ಕಾಯ್ದೆ ತಿದ್ದುಪಡಿ ಕುರಿತು ಮತ್ತು ಮುಖ್ಯಕಾರ್ಯನಿರ್ವಾಹಕರ ಶಾಸನಬದ್ಧ ಜವಾಬ್ದಾರಿಗಳ ಕುರಿತು ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗಂಗಾರಾಮ್ ಕೊಳಾಪ್ಪೆ ರವರು ಉಪನ್ಯಾಸ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿ ಶ್ರೀ ರಾಚಯ್ಯ ಹಿರೇಮಠ ರವರು ಕಾರ್ಯಕ್ರಮ ನಿರೂಪಿಸಿದರು. ಸಭೆಯಲ್ಲಿ 223 ಸೌಹಾರ್ದ ಸಹಕಾರಿಗಳಿಂದ 279 ಪ್ರತಿನಿಧಿಗಳು ಭಾಗವಹಿಸಿದ್ದರು.

# ಸೌಹಾರ್ದ ಸಹಕಾರಿಗಳ ಕ್ರೀಡೋತ್ಸವ



**ಶಿವಮೊಗ್ಗ :** ದಿನಾಂಕ 04.01.2026ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇವರ ಸಹಯೋಗದೊಂದಿಗೆ ಸಹ್ಯಾದ್ರಿ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ಇವರ ಸಂಯುಕ್ತಾಶ್ರಯದಲ್ಲಿ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳಿಗಾಗಿ ಸೌಹಾರ್ದ ಸಹಕಾರಿ ದಿನಾಚರಣೆ ಮತ್ತು ಕ್ರೀಡೋತ್ಸವ–2025ಅನ್ನು ಕಮಲಾ ನೆಹರು ಕಾಲೇಜು ಆವರಣ ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಪೂರ್ವದಲ್ಲಿ ಧ್ವಜಾರೋಹಣವನ್ನು ಮ್ಯಾಮ್ಕೋಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶ್ರೀಕಾಂತ್ ಬರುವೆ ರವರು ನೆರವೇರಿಸಿದರು. ಕ್ರೀಡೋತ್ಸವದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ನೆರವೇರಿಸಿದರು. ಸಂಜೆ ಕಾರ್ಯಕ್ರಮದ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ವಹಿಸಿದ್ದರು. ಸಮಾರಂಭದ ಉದ್ಘಾಟನೆಯನ್ನು ಶಿವಮೊಗ್ಗ ನಗರದ ಮಾನ್ಯ ಶಾಸಕರಾದ ಶ್ರೀ ಚನ್ನಬಸಪ್ಪ ರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ರಾಷ್ಟ್ರೀಯ ಶಿಕ್ಷಣ ಸಮಿತಿ (ರಿ), ಶಿವಮೊಗ್ಗ ಇದರ ಅಧ್ಯಕ್ಷರಾದ ಶ್ರೀ ಜಿ.ಎಸ್. ನಾರಾಯಣ ರಾವ್ ರವರು ಭಾಗವಹಿಸಿದ್ದರು. ಸಹ್ಯಾದ್ರಿ ಸೌಹಾರ್ದ ಸಹಕಾರಿ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸುರೇಶ್ ಜಿ.ಎಸ್. ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಹರೀಕೃಷ್ಣ ರವರು ವೇದಿಕೆಯಲ್ಲಿ ಉಪಸ್ಥಿ–ರಿದ್ದರು. ಕಾರ್ಯಕ್ರಮದಲ್ಲಿ 500 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.



**ಮೈಸೂರು :** ಮೈಸೂರು, ಮಂಡ್ಯ ಹಾಗೂ ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ ಮೈಸೂರು ಕುವೆಂಪುನಗರದಲ್ಲಿರುವ ಪ್ರಮತಿ ಹಿಲ್ ವ್ಯೂ ಅಕಾಡೆಮಿ ಪಿ. ಯು ಕಾಲೇಜಿನಲ್ಲಿ ಭಾನುವಾರ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯ–ರಿಗೆ ಹಾಗೂ ಸಿಬ್ಬಂದಿಗಳಿಗಾಗಿ ಆಟೋಟ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇದರ ಮಾಜಿ ಅಧ್ಯಕ್ಷರೂ, ಶಿಕ್ಷಣ ಸಲಹಾ ಸಮಿತಿಯ ಸದಸ್ಯರೂ ಆಗಿರುವ ಹೆಚ್.ವಿ. ರಾಜೀವ್ ಇವರು ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಬಿ.ಮಹದೇವಸ್ವಾಮಿ ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಒಕ್ಕೂಟದ ಅಧ್ಯಕ್ಷ ಎಸ್. ಆರ್. ನಾರಾಯಣರಾವ್ ವಹಿಸಿದ್ದರು. ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಆರ್. ಎಸ್. ಸುರೇಶ್ ಹಾಗೂ ಒಕ್ಕೂಟದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್. ಸಿ. ಭಗೀರಥ ಉಪಸ್ಥಿತರಿದ್ದರು. ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿದ್ದರು. ಸುಮಾರು ಹತ್ತು ವಿವಿಧ ಆಟೋಟ ಸ್ಪರ್ಧೆಗಳನ್ನು ನಡೆಸಲಾಯಿತು.



**ಚಿಕ್ಕಮಗಳೂರು :** ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ಇದರ ನೇತೃತ್ವದಲ್ಲಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರ ಸಹಯೋಗದೊಂದಿಗೆ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿ ಸಂಘಗಳ ಸಿಬ್ಬಂದಿಗಳಿಗಾಗಿ ದಿನಾಂಕ:17/01/2026 ರಂದು ಕೊಪ್ಪದ ಯಸ್ಕಾನ್ ವಾಣಿಜ್ಯ ಸಂಕೀರ್ಣದಲ್ಲಿ ಜಿಲ್ಲಾ ಮಟ್ಟದ ಸಂಕ್ರಾಂತಿ ಕ್ರೀಡೋತ್ಸವ–2026 ಯಶಸ್ವಿಯಾಗಿ ಜರುಗಿತು.

**ಉದ್ಘಾಟನಾ ಕಾರ್ಯಕ್ರಮ :**

ಕ್ರೀಡೋತ್ಸವದ ಉದ್ಘಾಟನಾ ಕಾರ್ಯಕ್ರಮದ ಉದ್ಘಾಟನೆಯನ್ನು ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ವೈ.ಎಸ್ ಸುಬ್ರಹ್ಮಣ್ಯ ರವರು ನೆರವೇರಿಸಿ ಭಾಗವಹಿಸಿರುವ ಎಲ್ಲ ಸ್ಪರ್ಧಿಗಳಿಗೆ ಶುಭ ಕೋರಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರಾ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ಪದ್ಮಾವತಿ ರಮೇಶ್, ಅಧ್ಯಕ್ಷರು, ಸಾಧನ ಮಹಿಳಾ ಸಹಕಾರ ಸಂಘ, ಕೊಪ್ಪ ಇವರು ಭಾಗವಹಿಸಿದ್ದರು. ಯಡಗೆರೆ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಆದರ್ಶಶರ್ಮ ಸ್ವಾಗತಿಸಿದರು, ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಕೌಶಿಕ್ ರವರು ವಂದನಾರ್ಪಣೆ ಮಾಡಿದರು. ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅಶೋಕ ರವರು ನಿರೂಪಣೆ ಮಾಡಿದರು.

**ಸಮಾರೋಪ ಕಾರ್ಯಕ್ರಮ :**

ಕ್ರೀಡೋತ್ಸವದ ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಒಕ್ಕೂಟದ ನಿರ್ದೇಶಕರಾದ ಶ್ರೀ ಪ್ರವೀಣ ಕೆಸವೆ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅಶೋಕ ಹಾಗೂ ಯಡಗೆರೆ ಸೌಹಾರ್ದ ಸಹಕಾರಿಯ ಸಲಹೆಗಾರರಾದ ಶ್ರೀ ರಘುನಂದನ ರವರು ಭಾಗವಹಿಸಿದ್ದರು. ವೇದಿಕೆಯಲ್ಲಿದ್ದ ಎಲ್ಲ ಗಣ್ಯರು ಸೇರಿ ವಿಜೇತರಿಗೆ ಪ್ರಶಸ್ತಿ ವಿತರಣೆ ಮಾಡಿದರು. ಸಂಕ್ರಾಂತಿ ಕ್ರೀಡೋತ್ಸವದಲ್ಲಿ ಪುರುಷ ವಿಭಾಗ, ಮಹಿಳಾ ವಿಭಾಗ ಹಾಗೂ ಸಂಯುಕ್ತ ವಿಭಾಗಗಳಿಂದ ಒಟ್ಟು 16 ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಇದರಲ್ಲಿ ಭಾಗವಹಿಸಲು 23 ಸೌಹಾರ್ದ ಸಹಕಾರಿ ಸಂಘಗಳಿಂದ 74 ಜನ ಸಿಬ್ಬಂದಿಗಳು ಹೆಸರು ನೋಂದಾಯಿಸಿದ್ದರು. 14 ಸೌಹಾರ್ದ ಸಹಕಾರಿಗಳ 34 ಜನ ಸಿಬ್ಬಂದಿಗಳಿಗೆ ಪ್ರಥಮ/ದ್ವಿತೀಯ/ತೃತೀಯ ಒಂದಲ್ಲ ಒಂದು ಪ್ರಶಸ್ತಿ ದೊರೆತಿದ್ದು, ಎಲ್ಲ ಸ್ಪರ್ಧೆ ಸೇರಿ ಒಟ್ಟು 49 ಪ್ರಶಸ್ತಿಗಳನ್ನು ವಿತರಿಸಲಾಯಿತು. 07 ಜನ ತೀರ್ಪುಗಾರರು 05 ಜನ ನಿರ್ವಾಹಕರು ಕ್ರೀಡೋತ್ಸವವನ್ನು ಯಶಸ್ವಿಗೊಳಿಸಲು ಸಹಕರಿಸಿದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಕೊಡಗು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಗಳಿಗಾಗಿ “ವಿಷಯಾಧಾರಿತ ತರಬೇತಿ ಕಾರ್ಯಕ್ರಮ” ವನ್ನು ದಿನಾಂಕ 20/01/2026 ಬೆಳಿಗ್ಗೆ 10 ಗಂಟೆಗೆ ಹೋಟೆಲ್ ದಿ ಫೋರ್ಟ್ ಮರ್ಕರಾ ಸಭಾಂಗಣ, ಮುಖ್ಯ ರಸ್ತೆ, ಕೊಡವ ಸಮಾಜ ಕಟ್ಟಡ, ಮಡಿಕೇರಿ ಇಲ್ಲಿ ಆಯೋಜಿಸಿಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ. ಮಹದೇವಸ್ವಾಮಿ ರವರು ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಎಂ.ಕೆ. ಸೋಮಯ್ಯ ರವರು, ಶ್ರೀ ಭಾಸ್ಕರ ಹೆಗಡೆ ಕಾಗೇರಿ ರವರು, ಮತ್ತು ಕೊಡವ ಎಂಟರ್‌ಪ್ರೆನ್ಯರ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಮಾನ್ಯ ಅಧ್ಯಕ್ಷರಾದ ಶ್ರೀ ದಿನೇಶ್ ಕಾರಿಯಪ್ಪ ರವರು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ್ ಆರ್ ಎಸ್ ರವರು ನಡೆಸಿಕೊಟ್ಟರು.

ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ “ಸೌಹಾರ್ದ ಸಹಕಾರಿ ಬೆಳವಣಿಗೆಯಿಂದ ನಾಯಕತ್ವ ಬೆಳವಣಿಗೆಗೆ ಇರುವ ಅವಕಾಶಗಳು” ಈ ವಿಷಯದ ಕುರಿತು ತರಬೇತಿಯನ್ನು ಮಾನ್ಯ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ಉಪನ್ಯಾಸ ನೀಡಿದರು. ದ್ವಿತೀಯ ಅವಧಿಯಲ್ಲಿ “ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು” ಈ ವಿಷಯದ ಕುರಿತು ಉಪನ್ಯಾಸವನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಮೂರನೇ ಅವಧಿಯಲ್ಲಿ “ಸೌಹಾರ್ದ ಕಾಯ್ದೆಯ ಅನುಗುಣವಾಗಿ ಆಡಳಿತ ಮಂಡಳಿ ಸದಸ್ಯರ ಅಧಿಕಾರ ಮತ್ತು ಪ್ರಕಾರ್ಯಗಳು” ಈ ವಿಷಯದ ಕುರಿತು ಉಪನ್ಯಾಸವನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಒಟ್ಟು ಕೊಡಗು ಜಿಲ್ಲೆಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕಗಳು ಸೇರಿ 15 ಸೌಹಾರ್ದ ಸಹಕಾರಿಗಳಿಂದ 49 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಚಾಮರಾಜನಗರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು, ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ "ವಿಷಯಾಧಾರಿತ ತರಬೇತಿ ಕಾರ್ಯಕ್ರಮ" ವನ್ನು ದಿನಾಂಕ 27.01.2026 ಬೆಳಿಗ್ಗೆ 10 ಗಂಟೆಗೆ ಮಹಾಮನೆ ಸಭಾಂಗಣ ಬಿ ರಾಜಯ್ಯ ಜೋಡಿ ರಸ್ತೆ, ಚಾಮರಾಜನಗರ ಇಲ್ಲಿ ಆಯೋಜಿಸಿಲಾಗಿತ್ತು. ಸದರಿ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ ಎಸ್ ಕೆ, ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ರವರು ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ರವರು, ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಲರಾಮ ಎನ್ ರವರು ನಡೆಸಿಕೊಟ್ಟರು.

ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ಸೌಹಾರ್ದ ಸಹಕಾರಿ ಬೆಳವಣಿಗೆಯಿಂದ ನಾಯಕತ್ವ ಬೆಳವಣಿಗೆಗೆ ಇರುವ ಅವಕಾಶಗಳು" ಈ ವಿಷಯದ ಕುರಿತು ತರಬೇತಿಯನ್ನು ಮಾನ್ಯ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ಉಪನ್ಯಾಸ ನೀಡಿದರು.

ದ್ವಿತೀಯ ಅವಧಿಯಲ್ಲಿ "ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಮೂರನೇ ಅವಧಿಯಲ್ಲಿ "ಸೌಹಾರ್ದ ಕಾಯ್ದೆಯ ಅನುಗುಣವಾಗಿ ಆಡಳಿತ ಮಂಡಳಿ ಸದಸ್ಯರ ಅಧಿಕಾರ ಮತ್ತು ಪ್ರಕಾರ್ಯಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಒಟ್ಟು ಚಾಮರಾಜನಗರ ಜಿಲ್ಲೆಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕಗಳು ಸೇರಿ 26 ಸೌಹಾರ್ದ ಸಹಕಾರಿಗಳಿಂದ 69 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾಸನ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು ಗಳಿಗಾಗಿ "ವಿಷಯಾಧಾರಿತ ತರಬೇತಿ ಕಾರ್ಯಕ್ರಮ" ವನ್ನು ದಿನಾಂಕ 19.01.2026 ಬೆಳಿಗ್ಗೆ 10 ಗಂಟೆಗೆ ಹೋಟೆಲ್ ಜ್ಯುವೆಲ್ ರಾಕ್, ಕೆ.ಆರ್.ಪುರ ಹಾಸನ ಇಲ್ಲಿ ಆಯೋಜಿಸಿಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾನ್ಯ ಮಾಜಿ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ನಡೆಸಿಕೊಟ್ಟರು. ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅಶೋಕ್ ನಡೆಸಿಕೊಟ್ಟರು.

ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ಸೌಹಾರ್ದ ಸಹಕಾರಿ ಬೆಳವಣಿಗೆಯಿಂದ ನಾಯಕತ್ವ ಬೆಳವಣಿಗೆಗೆ ಇರುವ ಅವಕಾಶಗಳು" ಈ ವಿಷಯದ ಕುರಿತು ತರಬೇತಿಯನ್ನು ಮಾನ್ಯ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ಉಪನ್ಯಾಸ ನೀಡಿದರು.

ದ್ವಿತೀಯ ಅವಧಿಯಲ್ಲಿ "ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಮೂರನೇ ಅವಧಿಯಲ್ಲಿ "ಸೌಹಾರ್ದ ಕಾಯ್ದೆಯ ಅನುಗುಣವಾಗಿ ಆಡಳಿತ ಮಂಡಳಿ ಸದಸ್ಯರ ಅಧಿಕಾರ ಮತ್ತು ಪ್ರಕಾರ್ಯಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಒಟ್ಟು ಹಾಸನ ಜಿಲ್ಲೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕಗಳು ಸೇರಿ 30 ಸೌಹಾರ್ದ ಸಹಕಾರಿಗಳಿಂದ 60 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಮೈಸೂರು :** ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಯಲ್ಲಿ 2024–25 ನೇ ಸಾಲಿನಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಇರುವ ಅವಕಾಶಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ : 28.01.2026ರ ಬುಧವಾರದಂದು ಬೆಳಿಗ್ಗೆ 10.00 ಕ್ಕೆ ದಿ ಇನ್ ಸ್ಟಿಟ್ಯೂಷನ್ ಆಫ್ ಇಂಜಿನಿರ್ಸ್, ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು ಇಲ್ಲಿ ಆಯೋಜಿಸಿಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಮಾನ್ಯ ಶಿಕ್ಷಣ, ಸಲಹಾ ಸಮಿತಿ ಸದಸ್ಯರು ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ರವರು, ಮಾನ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರಾದ ಶ್ರೀಮತಿ ಶಶಿರೇಖಾ ಎಸ್ ಎಂ ರವರು, ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ್ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಲರಾಮ್ ರವರು ನಡೆಸಿಕೊಟ್ಟರು.

ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ ವ್ಯವಹಾರಾಭಿವೃದ್ಧಿ ಯೋಜನೆ ಈ ವಿಷಯದ ಕುರಿತು ಉಪನ್ಯಾಸವನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ಉಪನ್ಯಾಸ ನೀಡಿದರು. ದ್ವಿತೀಯ ಅವಧಿಯಲ್ಲಿ ಸಹಕಾರಿಯಲ್ಲಿ ಗುಣಾತ್ಮಕ ಸಾಲ ನೀಡಿಕೆ ಮತ್ತು ವಸೂಲಾತಿ ಕ್ರಮಗಳು ಈ ವಿಷಯದ ಕುರಿತು ಉಪನ್ಯಾಸವನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀ ಶೇಖರ್ ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರು ಸೇರಿ 36 ಸೌಹಾರ್ದ ಸಹಕಾರಿಗಳಿಂದ 47 ಜನ ಪ್ರತಿನಿಧಿಗಳು ಭಾಗವಹಿಸಿದ್ದರು



**ದಕ್ಷಿಣ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಆಯ್ದ ತಾಲೂಕು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳಿಗಾಗಿ "ವಿಷಯಾಧಾರಿತ ತರಬೇತಿ ಕಾರ್ಯಕ್ರಮ" ವನ್ನು ದಿನಾಂಕ 30/01/2026 ಬೆಳಿಗ್ಗೆ 10 ಗಂಟೆಗೆ ಹೋಟೆಲ್ ಶ್ರೀನಿವಾಸ, ಹಂಪನಕಟ್ಟೆ ಮಂಗಳೂರು ಇಲ್ಲಿ ಆಯೋಜಿಸಿಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ರಮೇಶ್ ಹೆಚ್ ಎನ್ ನೆರವೇರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಭಾರತಿ ಜಿ ಭಟ್ ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ರವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಎಸ್ ಕೆ ಮಂಜುನಾಥ್ ಮಾನ್ಯ ನಿರ್ದೇಶಕರು ಕ. ರಾ.ಸೌ.ಸಂ.ಸ.ನಿ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ

ಮಾನ್ಯ ಶ್ರೀ ಭಾಸ್ಕರ ಹೆಗಡೆ ಕಾಗೇರಿ ರವರು, ಸಂಪನ್ಮೂಲ ವ್ಯಕ್ತಿಗಳಾಗಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಒಕ್ಕೂಟ ಸೌಹಾರ್ದದ ಅಧ್ಯಕ್ಷರಾದ ಭಾಸ್ಕರ್ ದೇವಸ್ಯ ಇವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ ಎಸ್ ರವರು , ಸ್ವಾಗತ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಂದನ್ ಬಿ ಎನ್ ರವರು ನಡೆಸಿಕೊಟ್ಟರು.

ಕಾರ್ಯಕ್ರಮದ ಪ್ರಥಮ ಅವಧಿಯಲ್ಲಿ "ಸೌಹಾರ್ದ ಸಹಕಾರಿ ಬೆಳವಣಿಗೆಯಿಂದ ನಾಯಕತ್ವ ಬೆಳವಣಿಗೆಗೆ ಇರುವ ಅವಕಾಶಗಳು" ಈ ವಿಷಯದ ಕುರಿತು ತರಬೇತಿಯನ್ನು ಮಾನ್ಯ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ ಇವರು ಉಪನ್ಯಾಸ ನೀಡಿದರು. ದ್ವಿತೀಯ ಅವಧಿಯಲ್ಲಿ "ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಮೂರನೇ ಅವಧಿಯಲ್ಲಿ "ಸೌಹಾರ್ದ ಕಾಯ್ದೆಯ ಅನುಗುಣವಾಗಿ ಆಡಳಿತ ಮಂಡಳಿ ಸದಸ್ಯರ ಅಧಿಕಾರ ಮತ್ತು ಪ್ರಕಾರ್ಯಗಳು" ಈ ವಿಷಯದ ಕುರಿತು ಉಪನ್ಯಾಸವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ ಎಸ್ ಇವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಒಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಆಯ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕಗಳು ಸೇರಿ 52 ಸೌಹಾರ್ದ ಸಹಕಾರಿಗಳಿಂದ 92 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಭ್ರಮದ ಗಣರಾಜ್ಯೋತ್ಸವ ಆಚರಣೆ

# ಸಂಯುಕ್ತ ಸಹಕಾರಿ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 77ನೇ ಗಣರಾಜ್ಯೋತ್ಸವ ಆಚರಣೆ



**ಬೆಂಗಳೂರು** : ದಿನಾಂಕ 26.01.2026 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಸಂಯಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ನೆರವೇರಿಸಿದರು, ಕಾರ್ಯಕ್ರಮದಲ್ಲಿ ಕೇಂದ್ರ ಕಛೇರಿ, ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು ಪ್ರಾಂತೀಯ ಕಛೇರಿ ಸಿಬ್ಬಂದಿಗಳು ಭಾಗವಹಿಸಿದ್ದರು.



**ಬೆಳಗಾವಿ** : ದಿನಾಂಕ 26.01.2026 ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ 77ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಮಾಜಿ ಸೈನಿಕರಾದ ಶ್ರೀ ಶಿವಾನಂದ ಕದಮ್ ರವರು ನೆರವೇರಿಸಿದರು ಈ ಸಂದರ್ಭದಲ್ಲಿ ಸ್ಥಳೀಯ ಸಹಕಾರಿಗಳು. ಪ್ರಾಂತೀಯ ಅಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳು, ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 26.01.2026 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಚೇರಿಯಲ್ಲಿ 77ನೇ ಗಣರಾಜ್ಯೋತ್ಸವ ಧ್ವಜಾರೋಹಣವನ್ನು ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ಹಾಗೂ ಆಸ್ತಾ ಮಹಿಳಾ ಸೌಹಾರ್ದ ಸಹಕಾರಿ ಸಂಘ ಅಧ್ಯಕ್ಷರಾದ ಶ್ರೀಮತಿ ಸಾವಿತ್ರಿ ಕುಳಗೇರಿಯವರು ಜಂಟಿಯಾಗಿ ನೆರವೇರಿಸಿದರು. ಈ ಸಂದರ್ಭದಲ್ಲಿ ಕಲಬುರ್ಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಎಸ್. ಪಾಟೀಲ ರವರು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಸ್ಥಳೀಯ ಸಹಕಾರಿಗಳ ಪ್ರತಿನಿಧಿಗಳು ಹಾಗೂ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು** : ದಿನಾಂಕ 26.01.2026 ರಂದು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯಲ್ಲಿ 77ನೇ ಗಣರಾಜ್ಯೋತ್ಸವದ ಪ್ರಯುಕ್ತ ಧ್ವಜಾರೋಹಣವನ್ನು ಸಂಯುಕ್ತ ಸಹಕಾ–ರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ ರವರು ಹಾಗೂ ಮೈಸೂರು ಕೊಡಗು ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾ–ರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾರಾಯಣ ರಾವ್ ರವರು ಜಂಟಿಯಾಗಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಹಾಗೂ ಪ್ರಾಂತದ ಸಿಬ್ಬಂದಿಗಳು ಭಾಗವಹಿಸಿದ್ದರು.



**ಬೀದರ** : ದಿನಾಂಕ 26.01.2026 ರಂದು ಸಂಯುಕ್ತ ಸಹಕಾರಿಯ ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ 77ನೇ ಗಣರಾಜ್ಯೋತ್ಸವ ಧ್ವಜಾರೋಹಣವನ್ನು ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಒಕ್ಕೂಟದ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳ ಭೇಟಿ ಹಾಗೂ ಆಡಳಿತ ಮಂಡಳಿ ಸಭೆ

**ಬೆಂಗಳೂರು ದಕ್ಷಿಣ (ರಾಮನಗರ) :** ದಿನಾಂಕ 07.01.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್ ರವರು ಬೆಂಗಳೂರು ದಕ್ಷಿಣ ಜಿಲ್ಲೆಯ(ರಾಮನಗರ) ಮಾನ್ಯ ಉಪನಿಬಂಧಕರಾದ ಶ್ರೀಮತಿ ಕವಿತಾ ಇವರನ್ನು ಭೇಟಿ ಮಾಡಿ ಸಂಯುಕ್ತ ಸಹಕಾರಿಯ ಕಿಟ್ ನೀಡುವುದರ ಮೂಲಕ ಹೊಸ ವರ್ಷದ ಶುಭಾಷಯಗಳನ್ನು ಕೋರಿದರು.

ದಿನಾಂಕ 07.01.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್ ರವರು ಬೆಂಗಳೂರು ದಕ್ಷಿಣ ಜಿಲ್ಲೆಯ(ರಾಮನಗರ) ಮಾನ್ಯ ಸಹಾಯಕ ನಿಬಂಧಕರಾದ ಶ್ರೀ ಪ್ರದೀಪ್ ಇವರನ್ನು ಭೇಟಿ ಮಾಡಿ ಸಂಯುಕ್ತ ಸಹಕಾರಿಯ ಕಿಟ್ ನೀಡುವುದರ ಮೂಲಕ ಹೊಸ ವರ್ಷದ ಶುಭಾಷಯಗಳನ್ನು ಕೋರಿದರು.

ದಿನಾಂಕ 07.01.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಮ್ ರವರು ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ (ರಾಮನಗರ) ಹೊಸದಾಗಿ ನೋಂದಣಿಗೊಂಡಿರುವ ರಾಮನಗರ ಜಿಲ್ಲಾ ಪೋಲೀಸ್ ಪತ್ತಿನ ಸೌಹಾರ್ದ ಸಹಕಾರಿ ಸಂಘಕ್ಕೆ ಭೇಟಿ ನೀಡಿ ಸಂಯುಕ್ತ ಸಹಕಾರಿಯ ಕಿಟ್ ನೀಡುವುದರ ಮೂಲಕ ಹೊಸ ವರ್ಷದ ಶುಭಾಷಯಗಳನ್ನು ಕೋರಿದರು.

ದಿನಾಂಕ 24.01.2026ರಂದು ಕ್ಯಾಪಿಟಲ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ, ಬೆಂಗಳೂರು ದಕ್ಷಿಣ ಜಿಲ್ಲೆ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ಸಾಲ ವಸುಲಾತಿ ಕ್ರಮ ಮತ್ತು ಆಧಾರ ರಹಿತ ಸಾಲಗಳು ಕುರಿತು ಚರ್ಚಿಸಿದರು. ನಿರ್ದೇಶಕರ ಜವಾಬ್ದಾ–ರಿಗಳ ಕುರಿತು ಅಗತ್ಯ ಮಾಹಿತಿ ನೀಡಿದರು.

**ತುಮಕೂರು :** ದಿನಾಂಕ 07.01.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತಿಪಟೂರು ಉಪವಿಭಾಗ, ತಿಪಟೂರು ಕಚೇರಿಗೆ ಭೇಟಿ ನೀಡಿ ಸಂಯುಕ್ತ ಸಹಕಾರಿಯ ಕಿಟ್ ನೀಡುವುದರ ಮೂಲಕ ಹೊಸ ವರ್ಷದ ಶುಭಾಷಯಗಳನ್ನು ಕೋರಿದರು.

ದಿನಾಂಕ 09.01.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಲೆಕ್ಕಪರಿಶೊಧನಾ ಇಲಾಖೆ, ತುಮಕೂರು ಕಚೇರಿಗೆ ಭೇಟಿ ನೀಡಿ ಸಂಯುಕ್ತ ಸಹಕಾರಿಯ ಕಿಟ್ ನೀಡುವುದರ ಮೂಲಕ ಹೊಸ ವರ್ಷದ ಶುಭಾಷಯಗಳನ್ನು ಕೋರಿದರು.

**ಬಾಗಲಕೋಟೆ :** ದಿನಾಂಕ 08.01.2026 ರಂದು ಬಾಗಲಕೋಟೆ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಟಾಸ್ಕ್ ಫೋರ್ಸ್ ಅಧಿಕಾರಿಗಳಾದ ಶ್ರೀ ಗಂಗಾರಾಮ್ ಕೊಲ್ಲಾಪ್ಪೆ, ಇವರ ಅಧ್ಯಕ್ಷತೆಯಲ್ಲಿ ನೀಲಗಿರೇಶ್ವರ ಸೌ ಸ ನಿ, ಬಾಗಲಕೋಟೆ ಸಹಕಾರಿಯ ಹಿಂದಿನ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಸಭೆಯನ್ನು ಆಯೋಜಿಸಲಾಗಿತು.

**ಬೆಂಗಳೂರು :** ದಿನಾಂಕ 20.01.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ರವರು ಶ್ರೀ ಹನುಮಗಿರಿ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ, ಬೆಂಗಳೂರು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದರು.

**ಚಾಮರಾಜನಗರ :** ದಿನಾಂಕ 02–01–2026ರಂದು ಯಳಂದೂರು ತಾಲೂಕಿನ ನೂತನ ಮಹಾಮೈತ್ರಿ ಸೌಹಾರ್ದ ಸಹಕಾರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು ಈ ಕಾರ್ಯಕ್ರಮದಲ್ಲಿ ಸಹಕಾ–ರಿಯ ಸದಸ್ಯರು ಸಹಕಾರಿ ಆಡಳಿತ ಮಂಡಳಿಯವರು ಭಾಗವಹಿಸಿದ್ದರು ನಂತರ ಗುಂಡ್ಲುಪೇಟೆ ತಾಲೂಕಿನ ಕಾರ್ಯ ನಿರತವಲ್ಲದ ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿಯ ಸರಿ ಸುಮಾರು 20 ಸದಸ್ಯರುಗಳನ್ನು ಒಳಗೊಂಡಂತೆ ಸಭೆಯನ್ನು ಆಯೋಜಿಸಿದ್ದು ಈ ಸಭೆಯಲ್ಲಿ ಸಹಕರಿಯ ಕಾರ್ಯ ನಿರ್ವಹಣೆಯನ್ನು ಮಾಡುವಂತೆ ಹಾಗೂ ಆಸಕ್ತಿ ಹೊಂದಿರುವ ಸದಸ್ಯರುಗಳು ಸಹಕಾರಿಯನ್ನು ನಡೆಸುವ ಕುರಿತು ಮಾಹಿತಿ ಮತ್ತು ಮಾರ್ಗದರ್ಶನವನ್ನು ನೀಡಲಾಯಿತು.

**ಮಂಡ್ಯ :** ಮಳವಳ್ಳಿಯ ಜೆ.ಆರ್.ಡಿ.ಎಸ್ ಮಹಿಳಾ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಲರಾಮ್ ಎನ್ ರವರು ಭಾಗವಹಿಸಿ ಸಹಕಾರಿಯು ಸ್ವಂತ ಬಂಡವಾಳಕ್ಕಿಂತ ನಷ್ಟವನ್ನು ಹೊಂದಿದ್ದು ಈ ಕುರಿತು ಸಭೆಯಲ್ಲಿ ಹಾಜರಿದ್ದ 10 ಮಂದಿ ನಿರ್ದೇಶಕರುಗಳಿಗೆ ಮಾಹಿತಿಯನ್ನು ನೀಡಲಾಯಿತು. ಮುಂದಿನ ದಿನಗಳಲ್ಲಿ ಸ್ವಂತ ಬಂಡವಾಳದ ನಷ್ಟವನ್ನು ಸರಿಪಡಿಸಿಕೊಳ್ಳಲು ಕೈಗೊಳ್ಳಬಹುದಾದ ಕಾರ್ಯ ಚಟುವಟಿಕೆಗಳ ಹಾಗೂ ಯೋಜನೆಯ ಕುರಿತು ಮಾಹಿತಿಯನ್ನು ನೀಡಿರುತ್ತಾರೆ ಹಾಗೂ ಸಹಕಾರಿಯ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ತಿಳಿಸಲಾಯಿತು.

## ಆಡಳಿತ ಮಂಡಳಿ ಸಭೆ

**ತುಮಕೂರು :** ದಿನಾಂಕ 23.01.2026ರಂದು ಶ್ರೀ ಶಿವಶಕ್ತಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಇದರ ಆಡಳಿತ ಮಂಡಳಿ ನಿರ್ದೇಶಕರ ಸಭೆಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ನರಸಿಂಹಮೂರ್ತಿ ರವರು ಸಹಕಾರಿಯ ಆರ್ಥಿಕ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು. ಸದರಿ ಮಾಹಿತಿಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿ ಸಂಯುಕ್ತ ಸಹಕಾರಿಯ ಮುಂದಿನ ಕಾನೂನು ಕ್ರಮಗಳ ಕುರಿತು ನಿರ್ದೇಶನಗಳನ್ನು ನೀಡಿದರು. ಮುಂದುವರೆದೂ, ಸೌಹಾರ್ದ ನ್ಯಾಯಾಲಯದಲ್ಲಿ ದಾಖಲಾಗಿರುವ ಸಹಕಾರಿಯ ದಾವೆಗಳ ಕುರಿತು ಮಾಹಿತಿ ಪಡೆದು ಮುಂದಿನ ಹಂತಗಳ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

ದಿನಾಂಕ 23.01.2026ರಂದು ಯಲ್ಲಾಪುರ ವರ್ತಕರ ಸೌಹಾರ್ದ ಪತ್ತಿನ ಸಹಕಾರಿ ನಿ, ತುಮಕೂರು ಇದರ ಆಡಳಿತ ಮಂಡಳಿ ನಿರ್ದೇಶಕರ ಸಭೆಯನ್ನು ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು. ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಜೇಂದ್ರ ಕುಮಾರ್ ಸಿ. ರವರು ಸಹಕಾರಿಯ ಆರ್ಥಿಕ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು. ಸದರಿ ಮಾಹಿತಿಯ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿ ಸಂಯುಕ್ತ ಸಹಕಾರಿಯ ಮುಂದಿನ ಕಾನೂನು ಕ್ರಮಗಳ ಕುರಿತು ನಿರ್ದೇಶನಗಳನ್ನು ನೀಡಿದರು. ಮುಂದುವರೆದೂ, ಸೌಹಾರ್ದ ನ್ಯಾಯಾಲಯದಲ್ಲಿ ದಾವೆಗಳನ್ನು ದಾಖಲು ಮಾಡುವ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

---

**ತುಮಕೂರು :** ದಿನಾಂಕ 25.01.2026ರಂದು ಶ್ರೀ ಶಂಕರಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ, ತುಮಕೂರು ಇದರ ಪ್ರಾರಂಭೋತ್ಸವ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಭಾಗವಹಿಸಿ ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಅಧ್ಯಕ್ಷರಿಗೆ ಹಾಗೂ ಆಡಳಿತ ಮಂಡಳಿ ನಿರ್ದೇಶಕರಿಗೆ ಶುಭಾಶಯಗಳನ್ನು ಕೋರಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಟಿ.ಎಲ್. ಸುರೇಶ್‌ರಾವ್ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

**ತುಮಕೂರು :** ದಿನಾಂಕ 25.01.2026ರಂದು ಶ್ರೀ ಶಿವಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಇದರ ಪ್ರಾರಂಭೋತ್ಸವ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಭಾಗವಹಿಸಿ ಸಂಯುಕ್ತ ಸಹಕಾರಿಯ ವತಿಯಿಂದ ಸಹಕಾರಿಯ ಅಧ್ಯಕ್ಷರಿಗೆ ಹಾಗೂ ಆಡಳಿತ ಮಂಡಳಿ ನಿರ್ದೇಶಕರಿಗೆ ಶುಭಾಶಯಗಳನ್ನು ಕೋರಿದರು. ಈ ಸಂದರ್ಭದಲ್ಲಿ ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ ರವರು, ನಿರ್ದೇಶಕರಾದ ಶ್ರೀ ಟಿ.ಎಲ್. ಸುರೇಶ್‌ರಾವ್ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

**ತುಮಕೂರು :** ದಿನಾಂಕ 12.01.2026ರಂದು ಹಿರಿಯ ಉಪನೋಂದಣಾಧಿಕಾರಿ ಲಚೇರಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ತುಮಕೂರು ರವರ ಕಚೇರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಹಾಗೂ ತುಮಕೂರು ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಲಕ್ಷ್ಮೀನಾರಾಯಣ ರವರು ಹಾಗೂ ಜಿಲ್ಲಾ ಒಕ್ಕೂಟದ ನಿರ್ದೇಶಕರು ಭೇಟಿ ನೀಡಿ ಹಿರಿಯ ಉಪನೋಂದಣಾಧಿಕಾರಿಗಳಾದ ಶ್ರೀಮತಿ ಕಲಾವತಿ ಜೆ. ಇವರನ್ನು ಭೇಟಿ ಮಾಡಿ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಸೌಹಾರ್ದ ಸಹಕಾರಿಗಳಿಗೆ ಉಂಟಾಗುತ್ತಿರುವ ತಾಂತ್ರಿಕ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವಂತೆ ಕೋರಿದರು. ಡಿಜಿಟಲ್ ಇ–ಸ್ಟಾಂಪಿಂಗ್‌ಗೆ ಸಂಬಂಧಿಸಿದ ತರಬೇತಿ ಕುರಿತು ಮಾಹಿತಿ ಪಡೆದುಕೊಂಡರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

**ಬೆಂಗಳೂರು :** ದಿನಾಂಕ 16.01.2026ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಸುರಭಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಸಹಕಾರಿಗೆ ಭೇಟಿ ನೀಡಿದರು. ಸಹಕಾರಿಯ ಸುಸ್ತಿ ಸಾಲಗಳ ಕುರಿತು ಚರ್ಚಿಸಿ, ಕಾನೂನಿನಂತೆ ಕ್ರಮವಹಿಸಲು ಸಲಹೆ ನೀಡಿದರು. ಪ್ರಸಕ್ತ ಸಾಲಿನ ಆರ್ಥಿಕ ವರ್ಷದಲ್ಲಿ ಸುಸ್ತಿ ಸಾಲದ ಪ್ರಮಾಣವನ್ನು ಶೇ. 10ಕ್ಕಿಂತ ಕಡಿಮೆ ಮಾಡಲು ಕ್ರಮ ಕೈಗೊಳ್ಳುವಂತೆ ಮಾರ್ಗದರ್ಶನ ನೀಡಿ ಸಹಕಾರಿಯು ಆರ್ಥಿಕ ಸಂಕಷ್ಟ ಸಹಕಾರಿಯಿಂದ ಹೊರ ಬರುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ರವರು ಉಪಸ್ಥಿತರಿದ್ದರು.



**ಬೆಂಗಳೂರು :** ದಿನಾಂಕ 16.01.2026ರಂದು 3 Month Certificate course in various domains of management ತರಬೇತಿಯನ್ನು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ, ಬೆಂಗಳೂರು ಇವರು DGR Ministry of Defence, Government of india ಇವರಿಗೆ ಆಯೋಜಿಸಿರುವ ಸಮಾರೋಪ ಕಾರ್ಯಕ್ರಮದಲ್ಲಿ (Valediction Function) ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.



**ಚಿಕ್ಕಮಗಳೂರು :** ದಿನಾಂಕ: 04.01.2026 ರಂದು ಸಮಾನ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಚಿಕ್ಕಮಗಳೂರು ಇದರ ಸಂಸ್ಥಾಪಕ ದಿನಾಚರಣೆಯನ್ನು ವೆನ್ಯೂ ಎಕೋ ಸ್ಟೇ ರೇ ಸಾರ್ಟ್, ಹಿರೇಕೊಳಲೇ ಲೇಕ್ ಚಿಕ್ಕಮಗಳೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಹಾಗೂ ಚಿಕ್ಕಮಗಳೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಕೆ.ಬಿ ದೇವ್‌ರಾಜು , ಉಪಾಧ್ಯಕ್ಷರಾದ ಶ್ರೀ ಡಿ.ಪಿ. ಕೃಷ್ಣಮೂರ್ತಿ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಬಿ.ವೈ ವೇಂಕಟೇಶ್ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು. ಸದರಿ ಸಭೆಯಲ್ಲಿ ಚಿಕ್ಕಮಗಳೂರು ಜಿಲ್ಲಾ ನಗರಸಭೆ ಅಧ್ಯಕ್ಷರಾದ ಶ್ರೀ ಶೀಲಾ ದಿನೇಶ್ ಮತ್ತು ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀಯುತ ಹೆಚ್.ಡಿ ತಮ್ಮಯ್ಯ ರವರು ಹಾಜರಿದ್ದರು. ಈ ವರ್ಷ ಸಹಕಾರಿ ವತಿಯಿಂದ ಶ್ರೀ ಕಾಮಧೇನು ಗೋಶಾಲೆಗೆ ಮೇವನ್ನು ನೀಡುವ ಮೂಲಕ ಅರ್ಥಪೂರ್ಣವಾಗಿ ಸಂಸ್ಥಾಪಕರ ದಿನವನ್ನು ಆಚರಿಸಲಾಯಿತು.



**ತುಮಕೂರು :** ದಿನಾಂಕ 01.01.2026ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಶಿವಾಜಿ ಸೌಹಾರ್ದ ಸಹಕಾರಿ ಸಂಘ ನಿ, ತುಮಕೂರು ಸಹಕಾರಿಯಲ್ಲಿ ಧ್ವಜಾರೋಹಣವನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಉಪಸ್ಥಿತರಿದ್ದರು

## ಪುಸ್ತಕ ಬಿಡುಗಡೆ ಕಾರ್ಯಕ್ರಮ

**ಬೆಂಗಳೂರು :** ದಿನಾಂಕ 17.01.2026ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಯಶಸ್ವಿನಿ ಮಹಿಳಾ ಸೌಹಾರ್ದ ಸಹಕಾರಿ ನಿ, ಬೆಂಗಳೂರು ಸಹಕಾರಿಯ ವತಿಯಿಂದ ಆಯೋಜಿಸಲಾಗಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎವಿಎಲ್ ರಾವ್ ರವರು ಮಾಹಿತಿ ಸಂಗ್ರಹಿಸಿ ರಚಿಸಿರುವ **"ಆಡಳಿತ ಮಂಡಳಿ ಕೈಪಿಡಿ"** ಪುಸ್ತಕವನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ನಾಗಮಣಿ ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರವಿಕುಮಾರ್ ರವರು ಭಾಗವಹಿಸಿದ್ದರು.

## ಪೂರ್ವಭಾವಿ ಸಭೆ

**ಧಾರವಾಡ :** ಧಾರವಾಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ ಕ್ರೀಡೋತ್ಸವವನ್ನು ಆಯೋಜಿಸುವ ಕುರಿತು ಪೂರ್ವಭಾವಿ ಸಭೆಯನ್ನು ದಿನಾಂಕ 20.01.2026 ರಂದು ಕೆಸಿಸಿ ಬ್ಯಾಂಕ್ ಹುಬ್ಬಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಜಿಲ್ಲಾ ನಿರ್ದೇಶಕರಾದ ಮಲ್ಲಿಕಾರ್ಜುನ ಹೂರಕೇರಿ ಯವರು ವಹಿಸಿದ್ದರು. ಸಭೆಯಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಬಸವರಾಜ್ ಹೊಂಗಲ್ ಸರ್, ಟಾಸ್ಕ್ ಫೋರ್ಸ್ ವಿಭಾಗದ ಮುಖ್ಯಸ್ಥರಾದ ಗಂಗಾರಾಮ್ ಕೊಳಾಪ್ಪೆ ಸರ್, ಬಾಗಲಕೋಟೆ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ವೆಂಕಟೇಶ ರಾಠೋಡ ರವರು ಉಪಸ್ಥಿತರಿದ್ದರು. ಸಭೆಯಲ್ಲಿ 76 ಜನ ಸಹಕಾರಿಗಳು ಭಾಗವಹಿಸಿದ್ದರು.

# 3 ದಿನಗಳ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಕಾರ್ಯಾಗಾರ



**ಬೆಂಗಳೂರು :** ದಿನಾಂಕ 04.02.2026 ರಂದು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ ದಲ್ಲಿ ಕರ್ನಾಟಕ ರಾಜ್ಯ ಸನ್ನದು ಲೆಕ್ಕಿಗರ ಸಂಘ, ಆಯೋಜಿಸಿರುವ 3 ದಿನಗಳ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಕಾರ್ಯಾಗಾರಕ್ಕೆ, Penelists ಗಳಾಗಿ ಶ್ರೀ ಜಿ. ಸಿ. ಜನಾರ್ಧನ್, ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನ ಇಲಾಖೆ, ಶ್ರೀಮತಿ ಸಾಧನಾ ಡಿ ಗಾವಂಕರ್, ಶ್ರೀ ಖಾನ್ ಪರ್ವೀಜ್, ಶ್ರೀ ಮಹೇಶ್ವರಪ್ಪ, ಶ್ರೀ ಮಧುಕರ್ ಹೆಗಡೆ ರವರು ಸನ್ನದು ಲೆಕ್ಕಪರಿಶೋಧಕರು, ಶ್ರೀ ಚಂದ್ರಕಾಂತ್ ಎಸ್. ಕಪಟಕರ್ ರವರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಭಾಗವಹಿದಿದ್ದರು, ಹಾಗೂ Moderator ಆಗಿ ಶ್ರೀ ಬಿ. ವಿ.ರವೀಂದ್ರನಾಥ್ ರವರು ಸನ್ನದು ಲೆಕ್ಕ ಪರಿಶೋಧಕರು ಭಾಗವಹಿಸಿದ್ದರು, ಕಾರ್ಯಾಗಾರದಲ್ಲಿ ಸಂಯುಕ್ತ ಸಹಕಾರಿಯ ಕಾಯ್ದೆ ಹಾಗೂ ಕಾಯ್ದೆಯಲ್ಲಿ ಉಲ್ಲೇಖವಾಗಿರುವ ಲೆಕ್ಕ ಪರಿಶೋಧಕರ ಅಂಶಗಳು ಹಾಗೂ ಸನ್ನದು ಲೆಕ್ಕ ಪರಿಶೋಧಕರು ಗಮನಿಸಬೇಕಾದ ಸಂಯುಕ್ತ ಸಹಕಾರಿಯ ಕಾಯ್ದೆ, ನಿಯಮ, & ಆರ್ಥಿಕ ಮಾನದಂಡಗಳ ಸುತ್ತೋಲೆ 1/1/2021 ಹಾಗೂ ಸಂಯುಕ್ತ ಸಹಕರಿಯು ಹೊರಡಿಸಿರುವ ಇತರೆ ಸುತ್ತೋಲೆಗಳಲ್ಲಿ ತಿಳಿಸಿರುವ ಅಂಶಗಳನ್ನು ಸಹಕಾರಿಯು ಉಲ್ಲಂಘನೆ ಮಾಡಿದ್ದಲ್ಲಿ, ಹಾಗೂ ನಿರ್ದೇಶಕರು ಹಣದ ದುರುಪಯೋಗ ಮಾಡಿದ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಿ ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸುವುದು ಸೂಕ್ತ ಎಂದು ಮಾನ್ಯ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಸಲಹೆ, ಸೂಚನೆ, ಮಾರ್ಗದರ್ಶನ ನೀಡಿದರು.

---

# ಶಾಖೆ ಉದ್ಘಾಟನೆ




**ಬೆಳಗಾವಿ :** ದಿನಾಂಕ 01.01.2026 ರಂದು ಶ್ರೀ ಮಹಾಲಕ್ಷ್ಮಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ, ಕೃಷ್ಣ ಕಿತ್ತೂರ ಸಹಕಾರಿಯ ಮಂಗಸೂಳಿ ಶಾಖೆಯ ಕಟ್ಟಡ ನವೀಕರಣ ಹಾಗೂ ವಾಸ್ತು ಪೂಜಾ ಸಮಾರಂಭದ ದಿವ್ಯ ಸಾನಿಧ್ಯವನ್ನು ಪ.ಪೂ ಶ್ರೀ ಬಸವೇಶ್ವರ ಮಹಾಸ್ವಾಮಿಗಳು, ಶ್ರೀ ಮಲ್ಲಿಕಾರ್ಜುನ ಗುರುದೇವಾಶ್ರಮ ಕೃಷ್ಣ ಕಿತ್ತೂರ ಮತ್ತು ಶ್ರೀ ಪ.ಪೂ. ಶ್ರೀ ಸಚ್ಚಿದಾನಂದ ಮಹಾಸ್ವಾಮಿಗಳು, ಶ್ರೀ ಗಿರಿಮಲ್ಲಿಕಾರ್ಜುನ ಆಶ್ರಮ ಮಂಗಸೂಳಿ ಇವರು ವಹಿಸಿದ್ದರು. ಕಾರ್ಯಕ್ರಮ ಅಧ್ಯಕ್ಷತೆಯನ್ನು ಶ್ರೀ ಬಸಪ್ಪ ಟಿಂಗಾಣಿ, ಅಧ್ಯಕ್ಷರು ಶ್ರೀ ಮಹಾಲಕ್ಷ್ಮೀ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ, ಇವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಜವಾಹರ ಮುಗ್ಗನವರ ಇವರು ಭಾಗವಹಿಸಿ ಸೌಹಾರ್ದ ಸಹಕಾರಿ ಚಳುವಳಿ ಕುರಿತು ಮಾಹಿತಿ ನೀಡಿದರು.

---



**ತುಮಕೂರು :** ದಿನಾಂಕ 01.01.2026ರಂದು ಸನ್‌ರೈಸ್ ಸೌಹಾರ್ದ ಸಹಕಾರಿ ಸಂಘ ನಿ, ಕ್ಯಾತ್ಸಂದ್ರ, ತುಮಕೂರು ಸಹಕಾರಿಯ ಕೋಳಾಲ ಗ್ರಾಮದ ನೂತನ ಶಾಖೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಸರೇಶ್‌ರಾವ್ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ಮತ್ತು ಶ್ರೀ ರವಿಕುಮಾರ್ ಕೆ.ಆರ್. ರವರು ಭಾಗವಹಿಸಿ ಸನ್‌ರೈಸ್ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ಇವರಿಗೆ ಶಾಲು ಹೊದಿಸಿ ಶುಭಾಶಯಗಳನ್ನು ಕೋರಿದರು.

# ಶತಮಾನೋತ್ಸವ ಸಮಾರಂಭ



**ಕೊಡಗು** : ದಿನಾಂಕ: 11.01.2026ರಂದು ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಡಿಕೇರಿ ಇದರ ಶತಮಾನೋತ್ಸವ ಸಮಾರಂಭ ಕಾರ್ಯಕ್ರಮವನ್ನು ಗೌಡ ಸಮಾಜ, ಮಡಿಕೇರಿಯಲ್ಲಿ ಆಯೋಜಿಸಲಾಗಿತ್ತು. ಸಹಕಾರಿಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ಮತ್ತು ಮಾನ್ಯ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಮತ್ತು ಮಾನ್ಯ ಶಾಸಕರಾದ ಶ್ರೀ ಎ ಎಸ್ ಪೊನ್ನಣ್ಣ ರವರು ನೆರವೇರಿಸಿದರು. ನಂತರ ಸಭಾ ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರು ಮತ್ತು ಕೊಡಗು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಶ್ರೀ ಯಧುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ರವರು ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ ನಂಜನಗೌಡ ರವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಶ್ರೀ ಡಾ. ಮಂತರ್ ಗೌಡ ರವರು ಹಾಗೂ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ ಪಿ ಸುಜಾ ಕುಶಾಲಪ್ಪ ರವರು, ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸದಸ್ಯರು ಹಾಗೂ ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದರು.



**ಮೈಸೂರು** : ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸಹಕಾರಿ ವತಿಯಿಂದ ದಿನಾಂಕ : 03.01.2025ರಂದು ಆಯೋಜಿಸಿರುವ ಸೌಹಾರ್ದ ಸಹಕಾರಿ ದಿನಾಚರಣೆ ಹಾಗೂ ಡೈರಿ ಮತ್ತು ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಮಾನ್ಯ ಶಾಸಕರಾದ ಶ್ರೀ ಜಿ ಟಿ ದೇವೇಗೌಡ ರವರು ಸಹಕಾರಿಯ ಮತ್ತು ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರು ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಭಾಗವಹಿಸಿದ್ದರು



**ಮೂಡುಬಿದಿರೆ** : 22.01.2026ರಂದು ಶ್ರೀ ಪಂಚಶಕ್ತಿ ಸೌಹಾರ್ದ ಸಹಕಾರಿ ಸಂಘದ ಕಚೇರಿಯು ನೂತನವಾಗಿ ಖರೀದಿಸಿದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಮೂಡುಬಿದಿರೆ ಮೂಲ್ಕಿ ವಿಧಾನ ಸಭಾಕ್ಷೇತ್ರದ ಶಾಸಕರಾದ ಶ್ರೀ. ಉಮಾನಾಥ. ಎ. ಕೋಟ್ಯಾನ್ ಉದ್ಘಾಟಿಸಿದರು. ಜೈನ ಮಠದ ಜಗದ್ಗುರು ಡಾ. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ ದಿಗಂಬರ ಮೂಡಬಿದಿರೆ ಶುಭ ಆರ್ಶೀವಾದ ನೀಡಿದರು. ಮೇಘನಾಥ ಶೆಟ್ಟಿ ಉದ್ಯಮುಗಳು ಅಶ್ವಿನ್. ಜೆ.ಪಿರೇರಾ ಉದ್ಯಮಿಗಳು ಸೇಫ್ ಲಾಕರನ್ನು ಉದ್ಘಾಟಿಸಿದರು. ಮೀಟಿಂಗ್ ಹಾಲ್‌ನ್ನು ಖ್ಯಾತ ಉದ್ಯಮಿಗಳು ಶ್ರೀಪತಿ ಭಟ್ ಮತ್ತು ಶ್ರೀಮತಿ ಡಾ. ಅಮರಶ್ರೀ ಅಮರನಾಥ ಶೆಟ್ಟಿಯವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ.ರಂಜಿತ್ ಪೂಜಾ–ರಿತೋಡಾರು ಇವರು ವಹಿಸಿದರು. ನಿರ್ದೇಶಕ ಶ್ರೀ.ಗೋಪಾಲ್ ಶೆಟ್ಟಿಗಾರ್ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ರಂಜಿತ್ ಪೂಜಾರಿ ತೋಡಾರು ಅವರು ಬ್ಯಾಂಕ್ ನಡೆದು ಬಂದದಾರಿಯನ್ನು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಪಾ. ಎಂ.ಮೋಹನ್ ಆಳ್ವ, ಕೃಷ್ಣ .ಜೆ. ಪಾಲಿಮಾರ್ ಕುಲದೀಪ್ ಎಂ ಚೌಟರ ಅರಮನೆ, ಅಬುಲಾಲ್ ಪುತ್ತಿಗೆ ಭಾಗವಹಿಸಿದರು. ಸಮಾರಂಭದಲ್ಲಿ ಸುಮಾರು750 ಕ್ಕೂ ಮಿಕ್ಕಿ ಗ್ರಾಹಕರು ಸೇರಿದ್ದರು ನಿರ್ದೇಶಕರಾದ ಶ್ರೀ ಸುರೇಶ್ ಎಂ ಪೂಜಾರಿ, ಶ್ರೀ ಗೋಪಾಲ್ ಶೆಟ್ಟಿಗಾರ್ ಶ್ರೀಮತಿ ಉಷಾ ಭಂಡಾರಿ, ಶ್ರೀ.ರಾಜೇಂದ್ರ ಬಿ, ಶ್ರೀ ರಮೇಶ ಶೆಟ್ಟಿ, ಶ್ರೀ ಶರತ್‌ಜೆ ಶೆಟ್ಟಿ, ಶ್ರೀ ರವೀಂದ್ರ ಕರ್ಕೇರ, ಶ್ರೀ ರತ್ನಾಕರ ಪೂಜಾರಿ, ಶ್ರೀ ನಾಗೇಶ್ ನಾಯ್ಕ, ಶ್ರೀಮತಿ ಮೀನಾಕ್ಷಿ ಅಂಚನ್ ಮುಖ್ಯಕಾರ್ಯನಿರ್ವಹಣಾಧಿಕಾರಿಯು. ರಾಜಶೇಖರ ಮಧ್ಯಸ್ಥಗಾರರು, ಉಪಸ್ಥಿತರಿದ್ದರು.

## ರಜತ ಮಹೋತ್ಸವ ಸಮಾರಂಭ



**ತಿಪಟೂರು :** ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಿಪಟೂರು ಇದರ 25ನೇ ವರ್ಷದ ರಜತ ಮಹೋತ್ಸವ ಸಮಾರಂಭ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮವನ್ನು ತಿಪಟೂರು ತಾಲ್ಲೂಕಿನ ಶಾಸಕರಾದ ಶ್ರೀ ಷಡಕ್ಷರಿ .ಕೆ ರವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ನಿರ್ದೇಶರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ಹಾಗೂ ಶ್ರೀ ಸಿ.ಪಿ ವಿಜಯ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ತಿಪಟೂರು ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಕೆ.ಎಸ್ ಹರೀಶ್ ಕುಮಾರ್ ರವರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಟಿ.ಎಲ್ ಸುರೇಶ್ ರಾವ್ ರವರು ಹಾಗೂ ಶ್ರೀ ಮಲ್ಲಿಕಾರ್ಜುನಯ್ಯ .ಜಿ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಮಾನ್ಯ ಅಧ್ಯಕ್ಷರು ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಜಣ್ಣ ಕೆ.ಎಂ ರವರಿಗೆ ಸನ್ಮಾನಿಸಿದರು. ಹಾಗೂ ಸಂಘದ ಬೆಳವಣಿಗೆಗೆ ಕಾರಣೀಕರ್ತರಾದ ಎಲ್ಲಾ ಆಡಳಿತ ಮಂಡಳಿ ಸದಸ್ಯರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ತಿಳಿಸಿದರು.

## ಅಮಲ್ಜಾರಿ ವಿಭಾಗದ ವಸೂಲಾಧಿಕಾರಿಯಾಗಿ ಟಿ. ಆರ್ ಸವಿತ



**ಬೆಂಗಳೂರು :** ದಿನಾಂಕ: 02.02.2026ರಂದು ಸೌಹಾರ್ದ ಸಹಕಾರಿಗಳ ಅಮಲ್ಜಾರಿ ವಿಭಾಗದ ವಸೂಲಾಧಿಕಾರಿಯಾಗಿ ಟಿ. ಆರ್ ಸವಿತ ರವರು ಅಧಿಕಾರವನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರಿಗೆ ಶುಭ ಕೋರಿದರು. ಟಾಸ್ಕ್ ಫೋರ್ಸ್ ಅಧಿಕಾರಿಯಾದ ಶ್ರೀಮತಿ ಶೋಭ ಆರ್, ದಾವಾ ಪಂಚಾಯ್ತಿ ನ್ಯಾಯಾಲಯ ನಿ.,441 ಅಧಿಕಾರಿ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಬೀಳ್ಕೊಡುಗೆ

ದಿನಾಂಕ 02.02.2026ರಂದು ಸೌಹಾರ್ದ ಸಹಕಾರಿಗಳ ಅಮಲ್ಜಾರಿ ವಿಭಾಗದ ವಸೂಲಾಧಿಕಾರಿಯಾಗಿ ಟಿ.ಆರ್ ಸವಿತ ರವರು ಶ್ರೀ ಹರೀಶ್ ಕುಮಾರ್ ಬಿ.ವಿ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿ, ಅಮಲ್ಜಾರಿ ವಿಭಾಗ ಇವರಿಂದ ಅಧಿಕಾರವನ್ನು ಸ್ವೀಕರಿಸಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಇವರಿಗೆ ಶುಭ ಕೋರಿ ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ದಾವಾ ಪಂಚಾಯ್ತಿ ನ್ಯಾಯಾಲಯ ನಿ.,441 ಅಧಿಕಾರಿ, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

### ಶ್ರೀ ಗುರು ರಾಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಸ್ಕಿ



ಶ್ರೀ ಪ್ರತಾಪಗೌಡ ಪಾಟೀಲ
ಅಧ್ಯಕ್ಷರು



ಶ್ರೀ ಬಿ.ಹೆಚ್ ದಿವಟರ್
ಉಪಾಧ್ಯಕ್ಷರು

### ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ನಿ., ಕಲಬುರಗಿ



ಶ್ರೀ ಸಂಜೀವ ಮಹಾಜನ
ಅಧ್ಯಕ್ಷರು



ಶ್ರೀ ಸಿದ್ರಾಮಪ್ಪ ಪಾಟೀಲ
ಉಪಾಧ್ಯಕ್ಷರು



## ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರಾಗಿ ಶ್ರೀ ಜನಾರ್ಧನ್

**ಬೆಂಗಳೂರು :** ಸಹಕಾರ ಸಂಘಗಳ ಲೆಕ್ಕಪ–ರಿಶೋಧನಾ ಇಲಾಖೆಯ ನಿರ್ದೇಶಕರಾಗಿ ಶ್ರೀ ಜನಾರ್ಧನ್ ಇವರನ್ನು ಸರ್ಕಾರ ನೇಮಕ ಮಾಡಿದೆ.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಪುತ್ತೂರು



ಶ್ರೀ ಎಸ್ ಆರ್ ಸತೀಶ್ಚಂದ್ರ
ಅಧ್ಯಕ್ಷರು



ಶ್ರೀ ಉಮೇಶ್ ಪ್ರಭು
ಉಪಾಧ್ಯಕ್ಷರು



## ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಹೆಚ್. ರಾಧಾಕೃಷ್ಣ ಹಾಲಂಬಿ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



## ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿ ಸಹಕಾರ ರತ್ನ ಶ್ರೀ ವಿಶ್ವನಾಥ ಚ. ಹಿರೇಮಠ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ



ಶ್ರೀ ಮೋಹಿತ್ ಮಸ್ಕಿ
ಅಧ್ಯಕ್ಷರು



ಶ್ರೀ ಮುರಳೀಧರ ರೆಡ್ಡಿ ಪಿ
ಉಪಾಧ್ಯಕ್ಷರು

## ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಮಸ್ಕಿ



ಶ್ರೀ ಪಂಪಣ್ಣ ಗುಂಡಳ್ಳಿ
ಅಧ್ಯಕ್ಷರು



ಶ್ರೀ ಚಿದಾನಂದ ಎಚ್.
ಉಪಾಧ್ಯಕ್ಷರು

## ಕಲಬುರ್ಗಿ ಸೌಹಾರ್ದ ಸಹಕಾರಿ ನಿ., ಕಲಬುರ್ಗಿ.



ಶ್ರೀ ಖೇಮಲಿಂಗ ಬಿ. ಶೇಡಗಾರ್
ಅಧ್ಯಕ್ಷರು



ಶ್ರೀ ಶ್ರೀನಿವಾಸ್ ಜೋಶಿ
ಉಪಾಧ್ಯಕ್ಷರು

## ಶ್ರೀ ಕೆಂಪೇಗೌಡ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ತುಮಕೂರು



ಶ್ರೀ ಕರಿಯಣ್ಣ
ಅಧ್ಯಕ್ಷರು



ಶ್ರೀ ಶಿವರಾಮಯ್ಯ
ಉಪಾಧ್ಯಕ್ಷರು

## ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಕುರಿತು ಹೈಕೋರ್ಟ್‌ನಲ್ಲಿ ದಾವಾ ದಾಖಲಾತಿ

**ಬೆಳಗಾವಿ :** ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಸಹಕಾರಿಯು ದಿನಾಂಕ 12.09.2025 ರಂದು ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಅಧಿನಿಯಮ 2025ರ ತಿದ್ದುಪಡಿ ಪ್ರಶ್ನಿಸಿ ಧಾರವಾಡ ಹೈಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿದ್ದು ನ್ಯಾಯಾಲಯವು ಸದರಿ ತಿದ್ದುಪಡಿ ಕುರಿತು ದಾವೆಯನ್ನು ದಾಖಲಿಸಿಕೊಂಡಿದೆ.

**ಜನತಾ ಸೌಹಾರ್ದ ಸಹಕಾರಿ ಸಂಘ ನಿ., ರಾಯಚೂರು.**



ಶ್ರೀ ಅಭಿಷೇಕ ಸಿಂಗನಾಳ
ಅಧ್ಯಕ್ಷರು



ಶ್ರೀ ಎಸ್. ಶರಣೇಗೌಡ
ಉಪಾಧ್ಯಕ್ಷರು

**ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು**



ಶ್ರೀ ಸದಾಶಿವರೆಡ್ಡಿ
ಅಧ್ಯಕ್ಷರು



ಶ್ರೀ ಸಿ. ಚೆನ್ನಾರೆಡ್ಡಿ
ಉಪಾಧ್ಯಕ್ಷರು

**ತಾವರಗೇರಾ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್ ನಿ, ತಾವರಗೇರಾ**



ಶ್ರೀ ಮಲ್ಲನಗೌಡ ಬಿ ಓಲಿ
ಅಧ್ಯಕ್ಷರು



ಶ್ರೀ ಶರಣಪ್ಪ ಜೆ ಐಲಿ
ಉಪಾಧ್ಯಕ್ಷರು



**ಚಿತ್ರದುರ್ಗ :** ವಿ.ಡಿ ಸಾವರ್ಕರ್ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಇದರ ವತಿಯಿಂದ ಸ್ವಾಮಿ ವಿವೇಕಾನಂದ ಜಯಂತಿ ಹಾಗೂ ಸ್ವಾತಂತ್ರ್ಯ ಯೋಧರ ದಿನದರ್ಶಿಕೆ ಬಿಡುಗಡೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ.ಆರ್ ನಾಗೇಂದ್ರ ಹಾಗೂ ಆಡಳಿತ ಮಂಡಳಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



**ಅರಸೀಕೆರೆ :** ದಿನಾಂಕ 25.01.2026ರಂದು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನಲ್ಲಿ ನೂತನವಾಗಿ ನೋಂದಣಿಯಾದ ಓಂ ಶ್ರೀ ಶಿವಶಕ್ತಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಸೌಹಾರ್ದ ಕಾಯ್ದೆಯ ಆಶಯಗಳನ್ನು, ಆಡಳಿತ ಮಂಡಳಿಯ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ತಿಳಿಸಲಾಯಿತು. ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಎನ್.ಆರ್ ಸಂತೋಷ್, ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರು ಹಾಗೂ ಸಹಕಾರಿಯ ಸದಸ್ಯರು ಭಾಗವಹಿಸಿದ್ದರು. ಸದರಿ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಆಕಾಶವಾಣಿ ಹಾಸನ ಜನಪ್ರಿಯ ನಿರೂಪಕರಾದ ಶ್ರೀ ವಿಜಯ್ ಅಂಗಡಿ ಇವರು ಭಾಗವಹಿಸಿ ರಾಸಾಯನಿಕ ಮುಕ್ತ ಸಾವಯವ ಕೃಷಿ ಪದ್ಧತಿ ಹಾಗೂ ಆಹಾರ ಕ್ರಮದ ಕುರಿತು ಮಾಹಿತಿ ನೀಡಿದರು.




**ದಾವಣಗೆರೆ :** ದಿನಾಂಕ 01.01.2026ರಂದು ಜಿ.ಎಂ. ಸೌಹಾರ್ದ ಸಹಕಾರಿ ಸಂಘ ನಿ, ದಾವಣಗೆರೆ ಇದರ ಕೇಂದ್ರ ಕಚೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್ ರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಸಾಧನೆಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್ ರವರು ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 26ನೇ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ




**ಉತ್ತರ ಕನ್ನಡ** : ದಿನಾಂಕ 01.01.2026 ರಂದು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ರವರು ನೆರವೇ–ರಿಸಿದರು. ಈ ಸಂದರ್ಭದಲ್ಲಿ ಶಿರಸಿ ನಗರದ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು, ಹಿರಿಯ ಸಹಕಾರಿಗಳು, ಮುಖ್ಯಕಾರ್ಯನಿರ್ವಹಕರು, ಕಚೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ತುಮಕೂರು** : ದಿನಾಂಕ 01.01.2026ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ತುಮಕೂರು ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ನಿಕಟಪೂರ್ವ ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯ ರವರು, ತುಮಕೂರು ಜಿಲ್ಲೆಯ ಸೌಹಾರ್ದ ಸಹಕಾರಿ ಪ್ರತಿನಿಧಿಗಳು, ಹಿರಿಯ ಸಹಕಾರಿಗಳು, ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್ ಮತ್ತು ಕಿರಿಯ ಸಹಾಯಕರಾದ ಶ್ರೀ ಗೋವಿಂದ ರವರು ಉಪಸ್ಥಿತರಿದ್ದರು.



**ದಾವಣಗೆರೆ** : ದಿನಾಂಕ 01.01.2026ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ದಾವಣಗೆರೆ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಮ್. ಆರ್. ಪ್ರಭುದೇವ್ ರವರು ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು, ಉಪಾಧ್ಯಕ್ಷರಾದ ಶ್ರೀ ರುದ್ರಗೌಡ್ರು, ದಾವಣಗೆರೆ ಜಿಲ್ಲೆಯ ಲೆಕ್ಕಪರಿಶೋಧಕರ ಸಂಘದ ಅಧ್ಯಕ್ಷರಾದ ಶ್ರೀ ಉಮೇಶ್ ಶೆಟ್ಟಿ ರವರು, ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರು, ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ಮತ್ತು ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ರವರು ಉಪಸ್ಥಿತರಿದ್ದರು.



**ಶಿವಮೊಗ್ಗ** : ದಿನಾಂಕ 01.01.2026ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಶಿವಮೊಗ್ಗ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಧ್ವಜಾರೋಹಣವನ್ನು ಆಚರಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ಹಾಗೂ ಸ್ಥಳೀಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.



**ದಕ್ಷಿಣ ಕನ್ನಡ** : ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಚೊಚ್ಚಲ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟ ರಿಟರ್ನಿಂಗ್ ಅಧಿಕಾರಿ ಶ್ರೀಮತಿ ತ್ರಿವೇಣಿ ರಾವ್ ಮತ್ತು ಸಹಾಯಕರಾಗಿ ಸಹಕರಿಸಿದ ಶ್ರೀ ನಾಗೇಂದ್ರ ಇವರನ್ನು ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 77ನೇ ಗಣರಾಜ್ಯೋತ್ಸವ ಆಚರಣೆ



**ಗದಗ :** ದಿನಾಂಕ 26.01.2026 ರಂದು ವೀರಶೈವ ಪಂಚಮಸಾಲಿ ಸೌಹಾರ್ದ ಸಹಕಾರಿಯಲ್ಲಿ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ವಿ.ಎಸ್ ಉಪ್ಪಿನ ಇವರು ನೆರವೇರಿಸಿದರು, ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ವಿಜಯಪುರ :** ದಿನಾಂಕ 26.01.2026 ರಂದು ವರಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿಯಲ್ಲಿ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜಯ ಪಾಟೀಲ ಇವರು ನೆರವೇರಿಸಿದರು, ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ದಾವಣಗೆರೆ :** 77ನೇ ಗಣರಾಜ್ಯೋತ್ಸವದ ಪ್ರಯುಕ್ತ ದಾವಣಗೆರೆ ಜಿಲ್ಲಾ ಸಂಪರ್ಕ ಕಚೇರಿ ಹಾಗೂ ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇವರ ಸಂಯುಕ್ತಾಶ್ರಯದಲ್ಲಿ ಧ್ವಜಾರೋಹಣವನ್ನು ಏರ್ಪಡಿಸಲಾಯಿತು. ಧ್ವಜಾರೋಹಣವನ್ನು ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್ ರವರು ನೆರವೇರಿಸಿದರು. ಉಪಾಧ್ಯಕ್ಷರಾದ ಶ್ರೀ ರುದ್ರಗೌಡ್ರು ಹಾಗೂ ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು. ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ವೈ.ಎಸ್. ರವರು ಭಾಗವಹಿಸಿದ್ದರು.

## ಪ್ರವರ್ತಕರ ಸಭೆ

**ಚಾಮರಾಜನಗರ :** ದಿನಾಂಕ : 16.01.2026ರಂದು ಚಾಮರಾಜನಗರ ಜಿಲ್ಲೆಯಲ್ಲಿ ನೂತನ ಸೌಹಾರ್ದ ಸಹಕಾರಿಯನ್ನು ರಚನೆ ಮಾಡುವ ಸಂಬಂಧ ಶ್ರೀ ಗಿರೀಶ್ ಹಾಗೂ ಇತರರೊಂದಿಗೆ ಮೈಸೂರಿನಲ್ಲಿ ಪ್ರವರ್ತಕರ ಸಭೆಯನ್ನು ಮಾಡಲಾಯಿತು. ಸದರಿ ಸಭೆಯಲ್ಲಿ ಒಟ್ಟು 10 ಮಂದಿ ಪ್ರವರ್ತಕರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಬಲರಾಮ್ ಎನ್ ರವರು ಭಾಗವಹಿಸಿ ನೂತನ ಸಹಕಾರಿ ನೊಂದಣಿ ಮಾಡುವ ಪ್ರಕ್ರಿಯೆ ಸೌಹಾರ್ದ ಚಳವಳಿ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು.



**ರಾಯಚೂರು :** ಸೌಹಾರ್ದ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರು ಮತ್ತು ಕಿರಣ ಸ್ವ ಸಹಾಯ ಸೌಹಾರ್ದ ಸಹಕಾರಿ ಸಂಘ ನಿ., ಸಿಂಧನೂರು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಂಜುಳಾ ಪಾಟೀಲರವರು ಸಂಯುಕ್ತ ಸಹಕಾರಿಯ ಪರವಾಗಿ ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ಉಪಸ್ಥಿತರಿದ್ದರು



**ಬೆಂಗಳೂರು** : ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ವತಿಯಿಂದ ಹೊಸ ವರ್ಷದ ಮತ್ತು ಸೌಹಾರ್ದ ಸಹಕಾರಿಯ ದಿನಾಚರಣೆ ಕಾರ್ಯಕ್ರಮವನ್ನು ದಿನಾಂಕ 01.01.2026 ರಂದು ಬೆಳಿಗ್ಗೆ 10.00 ಗಂಟೆಗೆ ವಿ.ವಿ. ಪುರಂ ನಲ್ಲಿರುವ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವು ಸಹಕಾರಿಯ ಅಧ್ಯಕ್ಷರಾದ ಶ್ರೀ ಸದಾನಂದರೆಡ್ಡಿ ಯವರ ಅಧ್ಯಕ್ಷತೆಯಲ್ಲಿ, ಮಾನ್ಯ ನಿರ್ದೇಶಕರು, ಸಿಬ್ಬಂದಿ ವರ್ಗದವರೆಲ್ಲರೂ ಪೂಜೆ, ದೇವರಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಆರಂಭಗೊಂಡು, ಪ್ರಾರ್ಥನೆಯೊಂದಿಗೆ ಮುಂದುವರೆಯಿತು. ಸಹಕಾರಿಯ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರೆಲ್ಲರೂ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಸದಾನಂದರೆಡ್ಡಿ ಯವರು ಹಾಜರಿದ್ದ ನಿರ್ದೇಶಕರ ಜೊತೆ ಗೂಡಿ, ಈ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಹಕಾರಿ ಧ್ವಜಾರೋಹಣವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಸಹಕಾರಿಯ ಜೊತೆಗೆ ತಮ್ಮ ಅನುಭವ, ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಸದಾನಂದರೆಡ್ಡಿಯವರು ಸಭೆಯನ್ನು ಉದ್ದೇಶಿಸಿ, ಸದಸ್ಯರಿಗೆ ಉತ್ತಮವಾದ ಸೇವೆ ನೀಡುತ್ತಾ ಬಂದಿರುವ ನಮ್ಮ ಸಿಬ್ಬಂದಿ ವರ್ಗದವರಿಗೆಲ್ಲರಿಗೂ ಅಭಿನಂದನೆಗಳ ಜೊತೆಗೆ ಧನ್ಯವಾದಗಳನ್ನು ತಿಳಿಸಿದರು. ಅಲ್ಲದೇ ಆಡಳಿತ ಮಂಡಳಿಯ ಮೇಲೆ ಸದಸ್ಯರು ಇಟ್ಟಿರುವ ನಂಬಿಕೆ ಮತ್ತು ಭರವಸೆಗೆ ಅನುಗುಣವಾಗಿ, ಪಾರದರ್ಶಕತೆಯ ಜೊತೆಗೆ, ಉತ್ತಮ ಪ್ರಗತಿಯನ್ನು ಸಾಧಿಸಬೇಕೆಂದು ತಿಳಿಸಿದರು. ನೂತನ ವರ್ಷ–2026ರ ಸಹಕಾರಿಯ ವಾಲ್ ಕ್ಯಾಲೆಂಡರ್‌ಗಳನ್ನು ಸಹ ಬಿಡುಗಡೆಗೊಳಿಸಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಪ್ರವೀಣ್ ಜಿ ವಿ, ಇವರು ಸಭೆಯನ್ನು ಉದ್ದೇಶಿಸಿ, ಎಲ್ಲಾ ಸಿಬ್ಬಂದಿ ವರ್ಗದವರೂ ಸಹಕಾರಿಯ ಸರ್ವತೋಮುಖ ಅಭಿವೃದ್ಧಿ ಮತ್ತು ಬೆಳವಣಿಗೆಗಾಗಿ ವೃತ್ತಿ ಪರಿಣಿತಿಯಿಂದ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು ಮತ್ತು ಸಹಕಾರಿಯ ವ್ಯವಸ್ಥಾಪಕರಾದ ಶ್ರೀ. ಸಿ. ತಿರುಪಾಲ ರೆಡ್ಡಿಯವರು ಈ ಕಾರ್ಯಕ್ರಮದ ನಿರೂಪಣೆಯನ್ನು ನಡೆಸಿಕೊಟ್ಟರು.

---



**ಬೆಂಗಳೂರು** : ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ವತಿಯಿಂದ ರಾಷ್ಟ್ರೀಯ ಯುವ ದಿನವನ್ನು ಸ್ವಾಮಿ ವಿವೇಕಾನಂದ ರಜನ್ಮ ದಿನಾಚರಣೆಯಾಗಿ ನಮ್ಮ ಸಹಕಾರಿಯಲ್ಲಿ ಭಕ್ತಿಭಾವ ಮತ್ತು ಉತ್ಸಾಹದಿಂದ ಆಚರಿಸಲಾಯಿತು. ಸ್ವಾಮಿ ವಿವೇಕಾನಂದರ ಜೀವನ ಉಪದೇಶಗಳು ಮತ್ತು ಆದರ್ಶಗಳನ್ನು ಸ್ಮರಿಸಿ, ಯುವಜನತೆಯನ್ನು ಚರಿತ್ರೆ ನಿರ್ಮಾಣ, ಆತ್ಮ ವಿಶ್ವಾಸ ಮತ್ತು ಸಮಾಜ ಸೇವೆಯತ್ತ ಪ್ರೇರೇಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮವು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಪ್ರವೀಣ್ ಜಿ ವಿ ಇವರಿಂದ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಆರಂಭಗೊಂಡು, ಪ್ರಾರ್ಥನೆಯೊಂದಿಗೆ ಮುಂದುವರೆಯಿತು. ಸಹಕಾರಿಯ ಸಿಬ್ಬಂದಿ ವರ್ಗದವರೆಲ್ಲರೂ ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ವ್ಯವಸ್ಥಾಪಕರಾದ ಶ್ರೀ ಸಿ. ತಿರುಪಾಲ ರೆಡ್ಡಿಯವರು, ರಾಷ್ಟ್ರೀಯ ಯುವ ದಿನದ ಮಹತ್ವವನ್ನು ವಿವರಿಸಿ, ಶಕ್ತಿ, ಏಕತೆ, ಶಿಸ್ತು ಹಾಗೂ ರಾಷ್ಟ್ರ ಸೇವೆಯ ಕುರಿತಾಗಿ ಸ್ವಾಮಿ ವಿವೇಕಾನಂದರು ನೀಡಿದ ಸಂದೇಶಗಳನ್ನು ಸ್ಮರಿಸಲಾಯಿತು.

ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ ಹಾಗೂ ಇಂದಿನ ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಸ್ವಾಮಿ ವಿವೇಕಾನಂದರ ತತ್ವಗಳ ಅಗತ್ಯತೆಯನ್ನು ನೆನಪಿಸಿಕೊಳ್ಳಲಾಯಿತು ಮತ್ತು ಎಲ್ಲಾ ಸಿಬ್ಬಂದಿ ವರ್ಗದವರೂ ಸಹ ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ಮತ್ತು ತತ್ವಗಳನ್ನು ಮೈಗೂಡಿಸಿಕೊಳ್ಳುವಂತೆ ಮತ್ತು ಸಹಕಾರಿಯ ಸರ್ವತೋಮುಖ ಅಭಿವೃದ್ಧಿ ಮತ್ತು ಬೆಳವಣಿಗೆಗಾಗಿ ವೃತ್ತಿಪರಿಣಿತಿಯಿಂದ ಕಾರ್ಯನಿರ್ವಹಿಸುತ್ತೇವೆಂದು ಈ ಸಂದರ್ಭದಲ್ಲಿ ಸಂಕಲ್ಪವನ್ನು ಕೈಗೊಳ್ಳಲಾಯಿತು.



**ಕೊಡಗು** : ಕೊಡವ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಲಿ. ದಿನಾಂಕ 01–01–2026ರಂದು ಸಂಯುಕ್ತ ಸಹಕಾರಿಯ ರಜತ ಮಹೋತ್ಸವ ಹಾಗೂ ಸೌಹಾರ್ದ ದಿನಾಚರಣೆಯನ್ನು ನಮ್ಮ ಸಹಕಾರಿಯ ಕಚೇರಿಯಲ್ಲಿ ಇದರ ಅಧ್ಯಕ್ಷರಾದ ಶ್ರೀ ಮುತ್ತಣ್ಣ ಪಿ ನೆಲಮಕ್ಕಡ ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಈ ಸಹಕಾರಿ ಅಧ್ಯಕ್ಷರು ಸೌಹಾರ್ದ ಸಹಕಾರಿಯು ಜನವರಿ 1 2001ರಲ್ಲಿ ಸ್ಥಾಪನೆಗೊಂಡು ಇಲ್ಲಿಯವರೆಗೆ ನಡೆದು ಬಂದ ಹಾದಿಯನ್ನು ಸಭೆಗೆ ವಿವರಿಸಿದರು. ಈ ರಜತ ಮಹೋತ್ಸವದ ಸಂದರ್ಭದಲ್ಲಿ ನಮ್ಮ ಸಹಕಾರಿಯ ಹಿರಿಯ ಸದಸ್ಯರನ್ನು, ಕೆಲವು ಠೇವಣಿದಾರರನ್ನು ಹಾಗೂ ನಿಷ್ಠಾವಂತ ಸಾಲಗಾರರನ್ನು ಸಭೆಗೆ ಆಹ್ವಾನಿಸಿ ಸನ್ಮಾನಿಸಲಾಯಿತು.



**ಮಡಿಕೇರಿ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ನಿ. ಬೆಂಗಳೂರು ಹಾಗು ಕೊಡಗು ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ. ಮಡಿಕೇರಿ ಇವರ ಸಂಯುಕ್ತ ಆಶ್ರಯದಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಕೊಡವ ಸಮಾಜ ಕಚೇರಿ ಸಭಾಂಗಣದಲ್ಲಿ ನಡೆಸಲಾಯಿತು. ಕೊಡಗು ಸೌಹಾರ್ದ ಪತ್ತಿನ ಸಹಕಾರಿ ಸಂಘದ ನಿರ್ದೇಶಕರಾದ ಚೆರುಮಂದಂಡ. ಜಿ. ಪೊನ್ನಪ್ಪ ಸಹಕಾರ ಧ್ವಜಾರೋಹಣಮಾಡಿ ಧ್ವಜಾವಂದನೆ ಸಲ್ಲಿಸಲಾಯಿತು. ಶ್ರೀಮತಿ ಬೊಪ್ಪಂಡ ಸರಳ ಕರುಂಬಯ್ಯ ಅವರು ಸಹಕಾರ ಗೀತೆಯನ್ನು ಹಾಡಿದರು. ಕೊಡಗು ಸೌಹಾರ್ದ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾದ ಮಂಡುವಂಡ ಮುತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ಕಾರ್ಯಕ್ರಮವನ್ನು ಮಡಿಕೇರಿ ಕೊಡವ ಸಮಾಜದ ಉಪಾಧ್ಯಕ್ಷರು ಹಾಗೂ ಮಡಿಕೇರಿ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯ ಕಾರ್ಯಾಧ್ಯಕ್ಷರಾದ ಕೇಕಡ. ಎ. ದೇವಯ್ಯರವರು ದೀಪಬೆಳಗುವುದ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಸಹಕಾರಿ ಸದಸ್ಯರುಗಳು ಸದಸ್ಯತ್ವವನ್ನು ಪಡೆಯುವುದು, ಠೇವಣಿ ಇಡುವುದು, ಸಾಲ ಪಡೆಯುವುದರ ಮೂಲಕ ಸಂಘದೊಂದಿಗೆ ನಿರಂತರ ವ್ಯವಹರಿಸಿ ಸಂಘದ ಏಳಿಗೆಗೆ ಸಹಕರಿಸುವಂತೆ ತಿಳಿಸಿದರು. ಮುಖ್ಯಕಾರ್ಯನಿರ್ವಹಾಧಿಕಾರಿ, ಪದಾಧಿಕಾರಿಗಳು ಹಾಗು ಸದಸ್ಯರು ಹಾಜರಿದ್ದರು.




**ಮೈಸೂರು** : ದಿನಾಂಕ : 21.01.2026ರಂದು ಸರಗೂರಿನಲ್ಲಿ ತೊಗಟವೀರ ನೇಕಾರರ ಸೌಹಾರ್ದ ಸಹಕಾರಿ ಸಂಘ, ಸರಗೂರು ಇದರ ನೂತನ ಸಹಕಾರಿಯ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರೀ ದಿವ್ಯಜ್ಞಾನ ನಂದಗಿರಿ ಸ್ವಾಮೀಜಿ ಅವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಸದಸ್ಯರು ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಸದಸ್ಯರು ಭಾಗವಹಿಸಿದರು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಸುರೇಶ್ ಆರ್ ಎಸ್ ರವರು ಭಾಗವಹಿಸಿ ಸಹಕಾರಿಯ ಸದಸ್ಯರು ಹಾಗೂ ಆಡಳಿತ ಮಂಡಳಿ ಸದಸ್ಯರ ಜವಬ್ದಾರಿಗಳ ಕುರಿತು ಮಾಹಿತು ನೀಡಿದರು.



**ಹೊಸಪೇಟೆ** : ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಇದರ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಲ್. ಎಸ್. ಆನಂದ್ ಇವರನ್ನು ಸಂಯುಕ್ತ ಸಹಕಾರಿಯ ಪರವಾಗಿ ಗೌರವಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿಯ ನಿರ್ದೇಶಕರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

**ದಿನಾಂಕ 28.12.2025 ರಂದು ಬೆಳಗಾವಿಯಲ್ಲಿ ನಡೆದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಬಡ್ಡಿಯೇತರ ಆದಾಯಗಳ ನಿರ್ವಹಣೆ (ನಾನ್‌ಫಂಡ್ ಬ್ಯುಸಿನೆಸ್) ಬಗ್ಗೆ ಶ್ರೀ ಗುರುಸ್ವಾಮಿ, ನಿವೃತ್ತ ಅಪರ ನಿಬಂಧಕರು ನೀಡಿದ ಉಪನ್ಯಾಸವನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಿದೆ.**



**ಕನ್ನಡ ಅನುವಾದ : ಶ್ರೀ ಶಂಕರ ಎಸ್, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**

1. ಸದಸ್ಯರ ಅರ್ಜಿ ಶುಲ್ಕ, ಷೇರು ಶುಲ್ಕ ಮತ್ತು ಷೇರು ಮೊತ್ತ ಮತ್ತು ನಕಲು ಶುಲ್ಕ.
2. ಸಾಲ ಅರ್ಜಿ ಶುಲ್ಕ, ಸಂಸ್ಕರಣಾ ಶುಲ್ಕ, ಕಾನೂನು ಶುಲ್ಕಗಳು ಮತ್ತು ವಸೂಲಾತಿ ಶುಲ್ಕಗಳು.
3. ಠೇವಣಿ ಅರ್ಜಿ ಮತ್ತು ಬಾಂಡ್ ಶುಲ್ಕ.
4. ಸಾಲ ಮತ್ತು ಠೇವಣಿಗಳ ಮೇಲಿನ ವಿಮೆ
5. ಖಾತರಿ/ಕ್ರೆಡಿಟ್ ಪತ್ರ (ಹಣಕಾಸು, ಕಾರ್ಯಕ್ಷಮತೆ, ಬಿಡ್)
6. ರಿಯಾಯಿತಿ/ಖರೀದಿ ಬಿಲ್‌ಗಳು.
7. ಡಿಡಿ/ಪೇ ಆರ್ಡರ್‌ಗಳು/ಬ್ಯಾಂಕರ್ಸ್ ಚೆಕ್‌ಗಳು.
8. ಎಲೆಕ್ಟ್ರಾನಿಕ್ ವರ್ಗಾವಣೆಗಳು (ಆರ್‌ಟಿಜಿಎಸ್, ನೆಫ್ಟ್, ಐಎಂಪಿಎಸ್)
9. ಕರೆನ್ಸಿ ವಿನಿಮಯ, ಪ್ರಯಾಣಿಕರ ಚೆಕ್‌ಗಳು, ಪಾಶ್ಚಿಮಾತ್ಯ ಹಣ ವರ್ಗಾವಣೆ
10. ಸರ್ಕಾರದಂತೆ ಕಾರ್ಯನಿರ್ವಹಿಸಿ ಏಜೆಂಟ್ (ತೆರಿಗೆ ಸಂಗ್ರಹ, ಪಿಂಚಣಿ ಪಾವತಿ, APY, PMFBY)
11. ಯುಟಿಲಿಟಿ ಬಿಲ್‌ಗಳ ಸಂಗ್ರಹ (ನೀರು, ವಿದ್ಯುತ್, ಫೋನ್, ಕೇಬಲ್, ಗ್ಯಾಸ್)
12. ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳು, POS ಮತ್ತು QR ಸೇವೆಗಳು
13. ATM ಬಳಕೆಯ ಸೇವೆ, 14. ಪಾವತಿ ಗೇಟ್‌ವೇ ಸೇವೆಗಳು
15. ಖಾತೆ ಹೇಳಿಕೆಗಳ ಶುಲ್ಕ, ಪಾಸ್‌ಬುಕ್ ಶುಲ್ಕ, ಚೆಕ್ ಪುಸ್ತಕ ಶುಲ್ಕ.
16. ಕನಿಷ್ಠ ಬ್ಯಾಲೆನ್ಸ್ ನಿರ್ವಹಣಾ ಶುಲ್ಕ.,
17. Pre-mature ಠೇವಣಿ ಶುಲ್ಕ
18. ಆರೋಗ್ಯ, ವಾಹನ, ಯಂತ್ರೋಪಕರಣಗಳ ಮೇಲಿನ ವಿಮೆ ಇತ್ಯಾದಿ.
19. ಟಿಕೆಟ್ ನೀಡುವಿಕೆ (ರೈಲು, ಬಸ್, ವಿಮಾನ)
20. ಮೊಬೈಲ್, ಟಿವಿ ಕೇಬಲ್ ರೀಚಾರ್ಜಿಂಗ್
21. ಇವಿ ವಾಹನಗಳ ಚಾರ್ಜಿಂಗ್, 22. ಸೇಫ್ ಲಾಕರ್‌ಗಳ ಸೌಲಭ್ಯಗಳು.
23. ಆಭರಣ ಸಾಲ – ಪರೀಕ್ಷಾ ಶುಲ್ಕ., 24. ಪಿಗ್ಮಿ ಸಂಗ್ರಹ ಶುಲ್ಕ.
25. ಚಿನ್ನದ ನಾಣ್ಯ/ಬಿಸ್ಕತ್ತು ಮಾರಾಟ ಮತ್ತು ಚಿನ್ನದ ಬಾಂಡ್ ಸ್ಕೀಮ್
26. ಇ–ಸ್ಟ್ಯಾಂಪಿಂಗ್
27. ಕಾಮನ್ ಸೇವಾ ಕ್ಯಾಂಟರ್ (CSC); ಕರ್ನಾಟಕ ಒನ್ / ಗ್ರಾಮ ಒನ್ ಸೇವೆಗಳು.
   - ಆಧಾರ್ ಸೇವೆಗಳು (ನೋಂದಣಿ ಮತ್ತು ನವೀಕರಣಗಳು)
   - . ಪ್ಯಾನ್ ಮತ್ತು ಸೇವೆಗಳು ಮತ್ತು ಪಾಸ್‌ಪೋರ್ಟ್ ಸೇವೆ
   - ಜಾತಿ ಮತ್ತು ಆದಾಯ ಪ್ರಮಾಣಪತ್ರ
   - . ಡಿಎಲ್ ಫಾರ್ಮ್, ಆರ್‌ಸಿ ಪ್ರತಿ
   - ಸಂಚಾರ ದಂಡ ಪಾವತಿ
   - ಆಸ್ತಿ ತೆರಿಗೆ, ಕಟ್ಟಡ ಯೋಜನೆ ಶುಲ್ಕ
   - ಆರೋಗ್ಯ ಕಾರ್ಡ್, ಹಿರಿಯ ನಾಗರಿಕ ಕಾರ್ಡ್
   - ಯುಟಿಲಿಟಿ ಬಿಲ್‌ಗಳ ಪಾವತಿಗಳು
   - . ಕಂದಾಯ ದಾಖಲೆಗಳು (ಆರ್‌ಟಿಸಿ, ಇಸಿ, ಎಂಆರ್)
28. ಪಿಎಂ–ಜನೌಷಧಿ ಕೇಂದ್ರ.
29. ಪಿಎಂ–ಕುಸುಮ ಯೋಜನೆ (ಸೋಲರ್), ಸೂರ್ಯಘರ್ ಯೋಜನೆ (ಛಾವಣಿ)
30. ಕುಡಿಯುವ ನೀರು ಸರಬರಾಜು ಘಟಕ.
31. ಎಲ್‌ಪಿಜಿ ಡೀಲರ್‌ಶಿಪ್.
32. ಬ್ಯಾಂಕ್ ವ್ಯವಹಾರ ವರದಿಗಾರ (ಬಿಸಿ)
33. ಮಣ್ಣು ಮತ್ತು ನೀರು ಪರೀಕ್ಷಾ ಪ್ರಯೋಗಾಲಯ.
34. ಕಾನೂನು ನೆರವು ಕೇಂದ್ರ.
35. ಇಂಧನ ಕೇಂದ್ರ (ಪೆಟ್ರೋಲ್/ಡೀಸೆಲ್)
36. ಜೈವಿಕ ಅನಿಲ ಸ್ಥಾವರ (ಗೋಬರ್ ಅನಿಲ)
37. ಚಿಟ್ ಫಂಡ್ ವ್ಯವಹಾರ
38. ಪಿಡಿಎಸ್, ರಸಗೊಬ್ಬರ, ಕೀಟನಾಶಕ ಮತ್ತು ಕೃಷಿ, ಯಂತ್ರೋಪಕರಣಗಳ ನೇಮಕ
39. ಸದಸ್ಯರ ಉತ್ಪನ್ನ ಖರೀದಿ ಮತ್ತು ಮಾರಾಟ (ಗ್ರಾಹಕ ಅಂಗಡಿಗಳು)
40. ಗೋದಾಮು ಮತ್ತು ಶೀತಲೀಕರಣ ಸೌಲಭ್ಯ.
41. ವಸ್ತು ಸಂಗ್ರಹಾಲಯ, ಉದ್ಯಾನವನ ನಿರ್ವಹಣೆ.
42. ಅಂಬುಲೆನ್ಸ್ ಸೇವೆ, 43. ಲ್ಯಾಬೋರೇಟರ್ ಸೇವೆ
44. ಪ್ರಥಮ ಚಿಕಿತ್ಸಾ ಕೇಂದ್ರ, 45. ಬ್ಲಡ್‌ಬ್ಯಾಂಕ್ ಸರ್ವೀಸಸ್
46. ಆಹಾರ ಪದಾರ್ಥಗಳ ಹೋಮ್ ಡೆಲಿವರಿ ಸರ್ವೀಸಸ್
47. ಹೋಮ್ ಸ್ಟೇ ನಿರ್ವಹಣೆ48. ಬಾಲ ವಿಕಾಸ ಕೇಂದ್ರಗಳ ನಿರ್ವಹಣೆ
49. ಹಿರಿಯ ನಾಗರಿಕರ ವಸತಿ ಕೇಂದ್ರ
50. ಸದಸ್ಯರ ಬೇಡಿಕೆಗನುಗುಣವಾಗಿ ಹೆಚ್ಚುವರಿ ಸೇವೆಗಳು.

# ಓದುಗರಿಗೊಂದು ಅಪರೂಪದ ಸಹಕಾರ ಸಂಘ

– ಶ್ರೀ ಸೂರ್ಯಕಾಂತ ರ್‍ಯಾಕಲೆ, ಪ್ರಾಂತೀಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಕಲಬುರಗಿ ಪ್ರಾಂತ.




ಹೈದ್ರಬಾದ ನಿಜಾಮನ ಆಡಳಿತದಿಂದ ಹಿಂದುಳಿದ ಹೈದ್ರಬಾದ ಕರ್ನಾಟಕ ಭಾಗವು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಬಿಸಿಲು ನಾಡು ಕಲಬುರಗಿಯಲ್ಲಿ ಓದುವ ಹವ್ಯಾಸ ಬೆಳೆಸುವುದರ ಮುಖಾಂತರ ಶೈಕ್ಷಣಿಕವಾಗಿ ಬೆಳೆಯುವುದರ ಮುಖಾಂತರ ಹಿಂದುಳಿದ ಹಣೆಪಟ್ಟಿಯಿಂದ ಹೊರ ಬರಲು ಓದುಗೊರಿಗೊಂದು ಸಹಕಾರ ಸಂಘ ಕಾರ್ಯನಿರ್ವಹಿಸುತ್ತಿರುವುದು ಕರ್ನಾಟಕದಲ್ಲಿ ವೈಶಿಷ್ಟವಾಗಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ, ಕಲಬುರಗಿ ಸಹಕಾರಿಯು ಸಹಕಾರ ಕ್ಷೇತ್ರದ ಹೆಮ್ಮೆಯ ಸಂಗತಿ.

**ಹಿನ್ನಲೆ,**

ಇಂದಿನ ಅಧುನಿಕ ಯುಗದಲ್ಲಿ ಸಾಮಾಜಿಕ ಜಾಲತಾಣಗಳ ಉಪಕರಣಗಳಿಂದಾಗಿ ಪುಸ್ತಕ ಓದುವುದು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಈ ಹಿನ್ನಲೆಯಲ್ಲಿ ಪುಸ್ತಕ ಓದುವ ಹವ್ಯಾಸ, ಲೇಖಕ–ರಿಗೆ ಪ್ರೋತ್ಸಾಹ, ಒಳ್ಳೆಯ ಗುಣಮಟ್ಟದ ಪುಸ್ತಕಗಳ ಪ್ರಕಟಣೆ ಒಳಗೊಂಡ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಉದ್ದೇಶದಿಂದ ಕಲಬುರಗಿ ನಗರದ ಕೆಲ ಆಸಕ್ತ ಸಾಹಿತಿಗಳು ಪ್ರತಿ ಹುಣ್ಣಿಮೆ ಒಂದು ಕಡೆ ಸೇರಿ ಚರ್ಚೆ, ಹರಟೆ ನಡೆಯುತ್ತಿದ್ದ ಕಾರ್ಯಕ್ರಮಕ್ಕೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ನೇಮಕಗೊಂಡು ಬಂದಿರುವ ನಾಡಿನ ಹಿರಿಯ ಸಾಹಿತಿ ಹಾ.ಮ.ನಾಯಕರವರು ಆಸಕ್ತ ಸಾಹಿತಿಗಳ ಹುಣ್ಣಿಮೆಯ ಚರ್ಚೆ, ಹರಟೆ ಕಾರ್ಯಕ್ರಮಕ್ಕೆ ಬಂದಾಗ ಈ ಭಾಗದ ಸಾಹಿತ್ಯದ ಬಗ್ಗೆ ಚರ್ಚೆ ನಡೆದಾಗ ಈ ನಾಡಿನಲ್ಲಿ ಹಲವಾರು ಲೇಖಕರು ಉತ್ತಮ ಪುಸ್ತಕಗಳು ರಚಿಸುವ ಸಾಮರ್ಥ್ಯ ಹೊಂದುವುದರ ಮುಖಾಂತರ ಸಮಾಜಕ್ಕೆ ಉತ್ತಮ ಸಂದೇಶ ಸಾರುವವರು ಇದ್ದಾರೆ, ಆದರೇ ಪುಸ್ತಕ ಪ್ರಕಟಣೆ ಮಾಡುವಷ್ಟು ಆರ್ಥಿಕ ಶಕ್ತಿ ಹೊಂದಿರುವುದಿಲ್ಲ ಹಾಗೂ ಪುಸ್ತಕಗಳನ್ನು ಓದುಗರಿಗೆ ತಲುಪಿಸಲು ಆಗುವುದಿಲ್ಲ. ಆದ್ದರಿಂದ ಹಲವು ಪ್ರತಿಭೆಗಳು ಪ್ರಾರಂಭದಲ್ಲಿ ಮುದುಡಿ ಹೋಗುತ್ತವೆ. ಈ ನಿಟ್ಟಿನಲ್ಲಿ ಬಳ್ಳಾರಿಯ ಲೋಹಿಯಾ ಪ್ರಕಾಶನ, ಧಾರವಾಡದ ಮನೋಹರ ಗ್ರಂಥಮಾಲೆ ಮಾದರಿಯಾಗಿಟ್ಟಿಕೊಂಡು ಕಲಬುರಗಿಯಲ್ಲಿ ಸಹ ಒಂದು ಪುಸ್ತಕ ಪ್ರಕಾಶನ ಅವಶ್ಯಕತೆಯಿದೆ. ಸಂಘದ ರೂಪದಲ್ಲಿ ಈಗಾಗಲೇ ಕೇರಳದಲ್ಲಿ ಪುಸ್ತಕ ಪ್ರಕಟಣೆ ಮತ್ತು ಓದುಗರಿಗಾಗಿ ರೈಟರಗಿಲ್ಡ್ ಹೆಸರಿನ ಸಹಕಾರ ಸಂಘ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ–ಎಂದು ವಿಷಯ ಹಂಚಿಕೊಂಡರು, ಪ್ರತಿ ಹುಣ್ಣಿಮೆಗೆ ಸೇರುವ ಸಾಹಿತ್ಯ ಆಸಕ್ತರಾದ ಶ್ರೀ ಗಿರಡ್ಡಿ ಗೋವಿಂದರಾಜು, ಶ್ರೀ ಚಂದ್ರಶೇಖರ ಕೂಸನೂರ, ಶ್ರೀ ಆರ್ ಕೆ ಹುಡಗಿ, ಬಳ್ಳಾರಿಯ ಶ್ರೀ ಚನ್ನಬಸವಣ್ಣ, ಡಾ. ಸ್ವಾಮಿರಾವ ಕುಲಕರ್ಣಿ ಹಾಗೂ ಶ್ರೀ ಅಪ್ಪಾರಾವ ಅಕ್ಕೋಣಿಯವರಿಗೆ ಡಾ. ಹಾ.ಮ. ನಾಯಕರವರ ಮಾತುಗಳ ಸ್ಫೂರ್ತಿಯಿಂದ ಕಲಬುರಗಿಯಲ್ಲಿ ಒಂದು ಸಂಸ್ಥಾ ರೂಪದಲ್ಲಿ ಸಂಘ ಪ್ರಾರಂಭಿಸಿ ಅದರ ಮೂಲಕ ಕಾರ್ಯನಿರ್ವಹಿಸಲು ಹಲವು ಸಲ ವಿಚಾರ ವಿನಿಮಯ, ಹಾಗೂ ಹಲವು ಕಡೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದರು, ರಾಜ್ಯದ ಹಿರಿಯ ಸಾಹಿತಿಗಳಾದ ಶ್ರೀ ಸಾ.ಶಿ. ಮರಳಯ್ಯನವರು ಬೆಂಗಳೂರಿನಲ್ಲಿ ಈ ರೀತಿಯ ಸಹಕಾರ ಸಂಘ ರಚಿಸಲು ಆಸಕ್ತಿ ವಹಿಸಿ ನೋಂದಣಿಗಾಗಿ ಷೇರು ಸಹ ಸಂಗ್ರಹಿಸಿದರು ಆದರೆ ಹಲವು ಕಾರಣದಿಂದ ಸಹಕಾರ ಸಂಘ ರಚನೆಗೊಳ್ಳದ ಕಾರಣ ಷೇರು ಹಣ ಮರುಪಾವತಿಸಿದರು, ಇವೆಲ್ಲದರ ಆಗುಹೋಗುಗಳನ್ನು ಅವಲೋಕಿಸಿ ಕಲಬುರಗಿ ನಗರದಲ್ಲಿ ದಿನಾಂಕ 13.03.2008 ರಂದು ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನೋಂದಣಿಯಾಗಿರುವುದು ಸಹಕಾರ ಸಂಘದ ವೈಶಿಷ್ಟ ಹಾಗೂ ವಿವಿಧ ಕ್ಷೇತ್ರದಲ್ಲಿ ಸಹಕಾರ ಸಂಘ ಪ್ರಾರಂಭಿಸಲು ಮಾದರಿ ಸಹಕಾರ ಸಂಘ ಎಂದು ಹೇಳಿದರೆ ಅತಿಶಯೋಕ್ತಿಯಲ್ಲ ಸಹಕಾರಿಯ ಅಧ್ಯಕ್ಷರಾದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ಅಪ್ಪಾರಾವ ಅಕ್ಕೋಣಿರವರ ನೇತೃತ್ವದ ಆಡಳಿತ ಮಂಡಳಿ ಇಂತಹ ಮಾದರಿ ಸಹಕಾರ ಸಂಘ ನಡೆಸಿಕೊಂಡು ಹೋಗುವುದರ ಜೊತೆ ಇತರೇ ಸಹಕಾರ ಸಂಘಗಳಿಗೆ ಹಾಗೂ ನೂತನ ಸಹಕಾರ ಸಂಘಗಳಿಗೆ ಮಾದರಿಯಾಗಿದೆ,

**ಸಹಕಾರಿ ಸಂಘ ಕೈಗೊಳ್ಳುತ್ತಿರುವ ಪ್ರಮುಖ ಕಾರ್ಯಗಳು**

**ಲೇಖಕರ ಪ್ರಶಸ್ತಿ :**

ಕಲ್ಯಾಣ ಕರ್ನಾಟಕದ ಹಿರಿಯ ಸಾಹಿತಿಗಳ ಸಾಧನೆಗಾಗಿ ಪ್ರಾಯೋಜ–ಕರ ಹೆಸರಿನಲ್ಲಿ ಪ್ರತಿ ವರ್ಷ ಕಲ್ಯಾಣ ನಾಡು ಸಾಹಿತ್ಯ ಶ್ರೀ ಪ್ರಶಸ್ತಿ ನೀಡಲಾಗುತ್ತಿದೆ ಇದರ ಮುಖಾಂತರ ಕಲ್ಯಾಣ ಕರ್ನಾಟಕದ ಸಾಹಿತಿಗಳನ್ನು ಓದುಗರಿಗೆ ಹಾಗೂ ಸಮಾಜಕ್ಕೆ ಪರಿಚಯ ಮಾಡಿಕೊಡುವುದರ ಮುಖಾಂತರ ಅವರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

**ಪುಸ್ತಕ ಪರಿಚಯ ಕಾರ್ಯಕ್ರಮ :**

ತಿಂಗಳಿಗೊಂದು ಪುಸ್ತಕ ಪರಿಚಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ, ಪುಸ್ತಕದ ಪರಿಚಯದೊಂದಿಗೆ ಪುಸ್ತಕ ವಿಮರ್ಶೆಯನ್ನು ಕೂಡ ಹಮ್ಮಿಕೊಳ್ಳಲಾಗುತ್ತಿದೆ. ಇಂತಹ ಕಾರ್ಯಕ್ರಮದಲ್ಲಿ ಮಾಡಿದ ಉಪನ್ಯಾಸಗಳನ್ನು ಸಂಗ್ರಹಿಸಿ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ.

**ಓದೋಣ–ಪುಸ್ತಕ ಬೆಳೆಸೋಣ–ಪುಸ್ತಕ :**

ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸುವ ದೃಷ್ಟಿಯಿಂದ ಪುಸ್ತಕಗಳನ್ನು ಓದಲುಕೊಟ್ಟು, ಅವುಗಳ ಸಾರಾಂಶವನ್ನು ಬರೆದುಕೊಡಲು ತಿಳಿಸಲಾಗುತ್ತದೆ. ಬರೆದ ಉತ್ತಮ ಬರಹಗಳಿಗೆ ಬಹುಮಾನ ನೀಡಲಾಗುವುದಲ್ಲದೇ, ಭಾಗವಹಿಸಿದ ಎಲ್ಲ–ರಿಗೂ ಪ್ರಮಾಣ ಪತ್ರ ಹಾಗೂ ಪುಸ್ತಕ ವಿತರಿಸಲಾಗುತ್ತದೆ.

**ದತ್ತಿ ಉಪನ್ಯಾಸಗಳು :**

ದಾನಿಗಳು ನೀಡಿರುವ ದಾನದ ಹಣದ ಬಡ್ಡಿಯಲ್ಲಿ 10–12 ದತ್ತಿ ಉಪನ್ಯಾಸಗಳನ್ನು ಪ್ರತಿ ವರ್ಷ ಒಂದು ವಿಷಯದ ಮೇಲೆ ಏರ್ಪಡಿಸಿ, ಅವುಗಳನ್ನು ಕ್ರೂಢಿಕರಿಸಿ ಪುಸ್ತಕ ಪ್ರಕಟಿಸಲಾಗುವುದು.

**ಪುಸ್ತಕಗಳ ಪ್ರಕಟಣೆ :**

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಡಾ॥ ಗೀತಾ ನಾಗಭೂಷಣ, ಡಾ. ಸಿದ್ದು ಯಾಪಲಪರ್ವಿ ಸೇರಿದಂತೆ ನಾಡಿನ ಹಲವಾರು ಲೇಖಕರ 175 ಕ್ಕಿಂತ ಅಧಿಕ ಪುಸ್ತಕಗಳನ್ನು ಪ್ರಕಟಣೆ ಮಾಡಲಾಗಿದೆ, ಪ್ರಕಟಣೆ ಮಾಡಿದ ಹಲವು ಪುಸ್ತಕಗಳು 2–3 ಕ್ಕಿಂತ ಅಧಿಕ ಮರು ಮುದ್ರಣಗೊಂಡಿವೆ.

**ಪ್ರತಿವರ್ಷ : ಲಾಭಂಶ ಘೋಷಣೆ :**

ಸಹಕಾರಿಯು ಪ್ರತಿವರ್ಷ ಲಾಭಂಶ ಘೋಷಿಸುತ್ತದೆ, ಲಾಭಾಂಶವು ಹಣದ ಬದಲಾಗಿ ಪುಸ್ತಕದ ರೂಪದಲ್ಲಿ ನೀಡಲಾಗುತ್ತದೆ.

**ಪ್ರಶಸ್ತಿಗಳು,**

ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎರಡು ಬಾರಿ ರಾಜೋತ್ಸವ ಪ್ರಶಸ್ತಿ

2024ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ದಿಂದ ಉತ್ತಮ ಪ್ರಕಾಶನ ಪ್ರಶ್ತಸಿ ಮತ್ತು ರೂ.1.00 ಲಕ್ಷ ನಗದು ಬಹುಮಾನ

2025 ರಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಅಪ್ಪರಾವ ಅಕ್ಕೋಣಿರವರಿಗೆ ಸಹಕಾರ ರತ್ನ ಪ್ರಶಸ್ತಿ

**ಮುಂದಿನ ಯೋಜನೆಗಳು :**

ಈ ಭಾಗದ ಲೇಖಕರ ಕೃತಿಗಳು, ಓದುಗರಿಗೆ ಲಭ್ಯ ವಾಗಿಸುವ ಹಿನ್ನಲೆಯಲ್ಲಿ ಪುಸ್ತಕ ಮಳಿಗೆ ಆರಂಭಿಸುವುದು.

ಪುಸ್ತಕ ಕೊಂಡು ಓದುವ ಹವ್ಯಾಸ ಇರುವ ಉತ್ತಮ ಓದುಗರಿಗೆ, ಪ್ರಶಸ್ತಿ ನೀಡುವುದು ಹಾಗೂ ಪುಸ್ತಕ ಸಂತೆ ಜರುಗಿಸುವುದು.

**ಸಹಕಾರಿಯ ಆರ್ಥಿಕ ವಿವರ :**

1. ಶೇರು ಬಂಡವಾಳ – 5,36,000
2. ನಿಧಿಗಳು – 9,69,162
3. ದತ್ತಿ ಉಪನ್ಯಾಸ ಠೇವಣಿ – 5,50,000
4. ಲಾಭ – 1,11,086 ಹೊಂದುವುದರ ಮುಖಾಂತರ ರೂ.26 ಲಕ್ಷದಷ್ಟು ದುಡಿಯುವ ಬಂಡವಾಳ ಹೊಂದಿದೆ.

**ಅಭಿಪ್ರಾಯಗಳು :**



**ಸಹಕಾರ ರತ್ನ ಪುರಸ್ಕೃತ ಅಪ್ಪರಾವ ಅಕ್ಕೋಣಿ, ಅಧ್ಯಕ್ಷರು, ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ, ಕಲಬುರಗಿ :** ನಮ್ಮ ಭಾಗದ ಜನರಲ್ಲಿ ಪುಸ್ತಕ ಸಂಸ್ಕೃತಿ ಮುಖಾಂತರ ಓದುವ ಹವ್ಯಾಸ ಬೆಳೆಸುವುದೆ ನಮ್ಮ ಸಂಘದ ಉದ್ದೇಶ.



**ಶ್ರೀಮತಿ ಶೈಲಜಾ ತಪಲಿ, ನಿರ್ದೇಶಕರು, ಕರಾಸೌಸಂಸನಿ, ಬೆಂಗಳೂರು :–** ಪುಸ್ತಕ ಓದುಗರ ಸಂಖ್ಯೆ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಸಹಕಾರ ಸಂಘದ ಮುಖಾಂತರ ಸಮಾಜದಲ್ಲಿ ಓದುವವರ ಸಂಖ್ಯೆ ಹೆಚ್ಚಿಸಲು ಶ್ರಮವಹಿಸುತ್ತಿರುವುದು ತುಂಬ ಸಂತೋಷದ ವಿಷಯ.



**ಶ್ರೀ ಸಂಜೀವ ಮಹಾಜನ, ವೃತ್ತಿಪರ ನಿರ್ದೇಶಕರು, ಕರಾಸೌಸಂಸನಿ, ಬೆಂಗಳೂರು :** ಬಹುತೇಕ ಸಹಕಾರಿಗಳು ಪತ್ತಿನ ಚಟುವಟಿಕೆ ನಡೆಸುತ್ತಿರುವ ಸಂದರ್ಭದಲ್ಲಿ ಲೇಖಕರಿಗೆ ಪ್ರೋತ್ಸಾಹ ನೀಡುವುದರ ಮುಖಾಂತರ ಓದುಗರಲ್ಲಿ ಓದುವ ಹವ್ಯಾಸ ಬೇಳೆಸುತ್ತಿರುವುದು ಸಹಕಾರ ಕ್ಷೇತ್ರಕ್ಕೆ ಹೆಮ್ಮೆಯ ವಿಷಯ.



**ಶ್ರೀ ವಿಶ್ವನಾಥ ಮಲಕೋಡ, ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಲಬುರಗಿ ಪ್ರಾಂತ :** ನಮ್ಮ ಪ್ರಾಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶೀಷ್ಟ ಸಹಕಾರ ಸಂಘ ಇಂತಹ ಮಾದರಿ ಸಹಕಾರ ಸಂಘಗಳು ರಾಜ್ಯದ ಇತರೆ ಭಾಗದಲ್ಲಿ ನೋಂದಣಿಗೊಂಡು ಕಾರ್ಯನಿರ್ವಹಿಸಲಿ.



**ಶ್ರೀ ಕಿಶೋರ್ ಕುಮಾರ್ ಪಾಟೀಲ, ಸಹಕಾರ ಸಂಘಗಳ ಉಪ ನಿಬಂಧಕರು ಕಲಬುರಗಿ :** ವಿಭಿನ್ನ ವಿಶಿಷ್ಟ ಸಹಕಾರ ಸಂಘಗಳಿಗೆ ಸರಕಾರಗಳು ಹಾಗೂ ಜನಸಾಮನ್ಯರು ಪ್ರೋತ್ಸಾಹ ನೀಡುವುದರ ಮುಖಾಂತರ ವಿಭಿನ್ನ ಸಹಕಾರ ಸಂಘಗಳಿಗೆ ಉತ್ತೇಜ ನೀಡಬೇಕು.

# ಕೋಪ್ ಕಿಚನ್: ಮಹಿಳಾ ಆಧಾರಿತ ಸಹಕಾರಿ ಉದ್ಯಮಶೀಲತೆಯ ಹೊಸ ಮಾದರಿ

ಮೂಲ : ದಿ ಕೋಪರೇಟರ್ ಪತ್ರಿಕೆ    ಅನುವಾದ : ಶ್ರೀಮತಿ ಕವಿತ ಆರ್. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು



**ಪೀಠಿಕೆ:**

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರು ಬಡತನ, ಸೀಮಿತ ಶಿಕ್ಷಣ, ನಿರುದ್ಯೋಗ, ಕೌಟುಂಬಿಕ ಹಿಂಸೆ, ಕಡಿಮೆ ವೇತನ ಮತ್ತು ಅವಕಾಶಗಳಿಗೆ ಸೀಮಿತ ಪ್ರವೇಶದಿಂದಾಗಿ ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳಿಗೆ ನಿರ್ಬಂಧಗಳಂತಹ ಹಲವು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಈ ಸವಾಲುಗಳನ್ನು ಎದುರಿಸಲು, ಭಾರತೀಯ ನೀತಿ ನಿರೂಪಕರು ಹಲವಾರು ಬಡತನ ನಿರ್ಮೂಲನೆ ಮತ್ತು ಉದ್ಯೋಗ ಸೃಷ್ಟಿ ಕಾರ್ಯಕ್ರಮಗಳನ್ನು ಪರಿಚಯಿಸಿದ್ದಾರೆ. ಅವುಗಳಲ್ಲಿ, ಸ್ವ-ಸಹಾಯ ಗುಂಪುಗಳು (SHGs) ಉಳಿತಾಯ, ಸಾಮೂಹಿಕ ಜವಾಬ್ದಾರಿ ಮತ್ತು ಪರಸ್ಪರ ಬೆಂಬಲವನ್ನು ಉತ್ತೇಜಿಸುವ ಮೂಲಕ ಮಹಿಳಾ ಸಬಲೀಕರಣ ಮತ್ತು ಆರ್ಥಿಕ ಸ್ವಾಯತ್ತತೆಗೆ ಪರಿಣಾಮಕಾರಿ ಕಾರ್ಯವಿಧಾನವಾಗಿ ಹೊರಹೊಮ್ಮಿವೆ. ಸುಮಾರು 90% ರಷ್ಟು ಮಹಿಳೆಯರು ಸ್ವ-ಸಹಾಯ ಗುಂಪುಗಳ ಸದಸ್ಯರನ್ನು ರೂಪಿಸುತ್ತಿರುವುದರಿಂದ ಈ ಸಾಮೂಹಿಕಗಳು ಗ್ರಾಮೀಣ ಜೀವನೋಪಾಯವನ್ನು ಸುಧಾರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ.

ಸ್ವಸಹಾಯ ಗುಂಪುಗಳ ಮೂಲಕ ಮಹಿಳೆಯರು ಕೌಶಲ್ಯಗಳು ಮತ್ತು ಆತ್ಮವಿಶ್ವಾಸವನ್ನು ಬೆಳೆಸಿಕೊಂಡು, ಸಾಮೂಹಿಕ ಚಟುವಟಿಕೆಗಳು ಹಾಗೂ ಅಧಿಕೃತ ಸಹಕಾರಿ ಉದ್ಯಮಗಳನ್ನು ಮುನ್ನಡೆಸಲು ಸಿದ್ಧರಾಗುತ್ತಾರೆ. ಸ್ಥಳೀಯ ಸಂಪನ್ಮೂಲಗಳು ಮತ್ತು ಕಡಿಮೆ ಮೂಲಧನದ ಅವಲಂಬಿತವಾಗಿರುವ ಸಹಕಾರಿ ಕ್ಷೇತ್ರವು ಸುಲಭವಾಗಿ ಲಭ್ಯವಾಗುವ ಉದ್ಯಮಾವಕಾಶಗಳನ್ನು ಒದಗಿಸಿ, ಕಾರ್ಯಕ್ಷಮತೆ, ಗುಣಮಟ್ಟದ ಸೇವೆ ಮತ್ತು ದೀರ್ಘಕಾಲಿಕ ಸಹಕಾರಿ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ.

**ಕೂಪ್ ಕಿಚನ್‌ನ ಉದಯ:**

ಈ ವಿಶಾಲ ಹಿನ್ನೆಲೆಯೊಳಗೆ, ಕೂಪ್ ಕಿಚನ್ ಎಂಬುದು ಮಹಿಳಾ ಆಧಾರಿತ ಸಹಕಾರಿ ಸಂಸ್ಥೆಯಾಗಿ ವಿಶಿಷ್ಟವಾಗಿ ಹೊರಹೊಮ್ಮಿದೆ. ಇದು ವಿಶ್ವಾಸಾರ್ಹ ಜೀವನೋಪಾಯದ ಅವಕಾಶಗಳನ್ನು ಒದಗಿಸುತ್ತದೆ, ಸಮುದಾಯ ಭಾಗವಹಿಸುವಿಕೆ, ಉದ್ಯಮಶೀಲತೆ ಮತ್ತು ಸಮಾವೇಶಿತ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ (NULM) ಗೆ ಹೊಂದಿಕೊಂಡಂತೆ, ಈ ಯೋಜನೆ ಸಮುದಾಯ ಸಂಘಟನೆ ಮತ್ತು ಕೌಶಲ್ಯಾಭಿವೃದ್ಧಿಗೆ ಒತ್ತು ನೀಡುತ್ತದೆ ಹಾಗೂ ಸ್ಕಿಲ್ ಇಂಡಿಯಾ, ಸ್ಟಾರ್ಟ್‌ಅಪ್ ಇಂಡಿಯಾ, ಆತ್ಮನಿರ್ಭರ ಭಾರತ ಅಭಿಯಾನಗಳಂತಹ ಪ್ರಮುಖ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.

**ವಿಕಾಸ ಮತ್ತು ಪ್ರಗತಿ:**

ದೀನದಯಾಳ್ ಅಂತ್ಯೋದಯ ಯೋಜನೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಮೊದಲಾದ ರಾಷ್ಟ್ರೀಯ ಉಪಕ್ರಮಗಳನ್ನು ಆಧಾರವಾಗಿಸಿಕೊಂಡು, ನ್ಯಾಷನಲ್ ಕೋ-ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ (ಎನ್‌ಸಿಯುಐ) ಮಹಿಳಾ ಸಬಲೀಕರಣದ ಪ್ರಯತ್ನಗಳನ್ನು ನಗರ ಪ್ರದೇಶಗಳಿಗೂ ವಿಸ್ತರಿಸಿತು. ಉದ್ಯಮಶೀಲತಾ ಅಭಿವೃದ್ಧಿ ಮತ್ತು ಸಹಕಾರ ಕೇಂದ್ರದ ಅಡಿಯಲ್ಲಿ ಏಪ್ರಿಲ್ 2022ರಲ್ಲಿ ಪ್ರಾರಂಭಿಸಲಾದ ಎನ್‌ಸಿಯುಐ ಇಂಕ್ಯುಬೇಶನ್ ಸೆಂಟರ್ ಮೂಲಕ ಈ ಮುಂದಾಳತ್ವ ಜಾರಿಗೆ ಬಂದಿತು.

ಈ ಚೌಕಟ್ಟಿನೊಳಗೆ, ಸಾಥಿನ್ ಸ್ವಸಹಾಯ ಗುಂಪು ಗಮನಾರ್ಹ ಯಶಸ್ಸಿನ ಕಥೆಯಾಗಿ ಹೊರಹೊಮ್ಮಿದ್ದು, ಸುಮಾರು 20 ವಿವಿಧ ಉತ್ಪನ್ನ ಸಾಲುಗಳಲ್ಲಿ ತರಬೇತಿಯನ್ನು ಪಡೆದಿದೆ. ಸಾಬೂನು ತಯಾರಿಕೆಯಿಂದ ಪ್ರಾರಂಭಿಸಿದ ಈ ಗುಂಪು, ಹಂತಹಂತವಾಗಿ ಅಲಂಕಾರಿಕ ಹೂಗಳು, ಚೀಲಗಳು, ಆಭರಣಗಳು ಮುಂತಾದ ಮೌಲ್ಯವರ್ಧಿತ ಉತ್ಪನ್ನಗಳತ್ತ ತನ್ನ ಚಟುವಟಿಕೆಗಳನ್ನು ವೈವಿಧ್ಯಗೊಳಿಸಿದ್ದು, ಇದರ ತಾಂತ್ರಿಕ ಕೌಶಲ್ಯಗಳು ಮತ್ತು ಸಾಮರ್ಥ್ಯದ ವೃದ್ಧಿಯನ್ನು ಪ್ರತಿಬಿಂಬಿಸುತ್ತದೆ.

ಈ ಚಟುವಟಿಕೆಗಳು ಆದಾಯವನ್ನು ಗಳಿಸುತ್ತಿದ್ದರೂ, ಅವು ಹೆಚ್ಚಾಗಿ ಸೀಮಿತ ಕೆಲಸದ ಸಮಯ ಮತ್ತು ಮಧ್ಯಂತರ ತೊಡಗಿಸಿಕೊಳ್ಳುವಿಕೆಯನ್ನು ಒಳಗೊಂಡಿರುತ್ತವೆ. ಹೆಚ್ಚು ಸ್ಥಿರ ಮತ್ತು ನಿರಂತರ ಜೀವನೋಪಾಯದ ಆಯ್ಕೆಯ ಅಗತ್ಯವನ್ನು ಗುರುತಿಸಿ, ಈ ಉಪಕ್ರಮವು ಕೂಪ್ ಕಿಚನ್ ಸ್ಥಾಪನೆಯ ಮೂಲಕ ಆಹಾರ ಮತ್ತು ಅಡುಗೆ ವಲಯಕ್ಕೆ ತನ್ನ ಉತ್ಪನ್ನ ಶ್ರೇಣಿಗಳಲ್ಲಿ ಒಂದನ್ನು ಕಾರ್ಯತಂತ್ರವಾಗಿ ವಿಸ್ತರಿಸಿತು. ಕೂಪ್ ಕಿಚನ್ ಅನ್ನು 16 ಅಕ್ಟೋಬರ್ 2023 ರಂದು ನ್ಯಾಷನಲ್ ಕೋ-ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ (ಎನ್‌ಸಿಯುಐ) ಕ್ಯಾಂಪಸ್‌ನಲ್ಲಿ ನ್ಯಾಷನಲ್ ಕೋ-ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ ಇವರ ಆರ್ಥಿಕ ಬೆಂಬಲದೊಂದಿಗೆ ಪ್ರಾರಂಭಿಸಲಾಯಿತು. ಕೋಪ್ ಕಿಚನ್ ಮಹಿಳೆಯರನ್ನು ಆರೋಗ್ಯಕರ, ಮನೆ ಶೈಲಿಯ ಆಹಾರ ಮತ್ತು ರಾಗಿ ಆಧಾರಿತ, ಪರಿಸರ ಸ್ನೇಹಿ ಅಭ್ಯಾಸಗಳ ಮೇಲೆ ಕೇಂದ್ರೀಕರಿಸಿದ ಅಡುಗೆ ಮತ್ತು ಅಡುಗೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಬಲೀಕರಣಗೊಳಿಸುತ್ತದೆ. ಇದರಿಂದಾಗಿ ಅವರ ಆರ್ಥಿಕ ಸ್ವಾತಂತ್ರ್ಯ ಮತ್ತು ಆರ್ಥಿಕ ಭದ್ರತೆಯನ್ನು ಬೆಂಬಲಿಸುತ್ತದೆ.

ಈ ಕ್ರಮದ ಮೂಲಕ, ಈ ಮುಂದಾಳತ್ವವು ಜಾಗತಿಕ ಅಭಿವೃದ್ಧಿ ಆದ್ಯತೆಗಳೊಂದಿಗೆ ಸಹ ಸಮನ್ವಯ ಸಾಧಿಸುತ್ತಿದ್ದು, ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ 2023 ಮತ್ತು ಅಂತರರಾಷ್ಟ್ರೀಯ ಸಹಕಾರಿಗಳ ವರ್ಷ 2025ರ ಉದ್ದೇಶಗಳಿಗೆ ಹೊಂದಾಣಿಕೆಯಾಗುತ್ತದೆ. ಇದಲ್ಲದೆ, ಕೂಪ್ ಕಿಚನ್ ಸುಸ್ಥಿರ ಅಭಿವೃದ್ಧಿ ಗುರಿ (SDG) 5 (ಲಿಂಗ ಸಮಾನತೆ)ಯನ್ನು ಮಹಿಳೆಯರ ಜೀವನೋಪಾಯ, ಕೌಶಲ್ಯ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಆರ್ಥಿಕ

ಸ್ವಾತಂತ್ರ್ಯಕ್ಕೆ ಪ್ರವೇಶವನ್ನು ಬಲಪಡಿಸುವ ಮೂಲಕ ಸುಸ್ಥಿರ ಅಭಿವೃದ್ಧಿ ಗುರಿ (SDG) 5 (ಲಿಂಗ ಸಮಾನತೆ)ಯನ್ನು ಮುನ್ನಡೆಸುತ್ತದೆ. ಇದರಿಂದಾಗಿ ಮಹಿಳೆಯರಿಗೆ ಜೀವನೋಪಾಯ, ಕೌಶಲ್ಯ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಬಲಪಡಿಸುತ್ತದೆ, ಇದರಿಂದಾಗಿ ಅವರನ್ನು ಸ್ವಾವಲಂಬಿ ಮತ್ತು ಸಬಲರನ್ನಾಗಿ ಮಾಡುತ್ತದೆ. ಇದು ನಿಯಮಿತ ಉದ್ಯೋಗವನ್ನು ಸೃಷ್ಟಿಸುವ ಮೂಲಕ, ಸುರಕ್ಷಿತ ಮತ್ತು ಗೌರವಾನ್ವಿತ ಕೆಲಸದ ಪರಿಸ್ಥಿತಿಗಳನ್ನು ಖಾತ್ರಿಪಡಿಸುವ ಮೂಲಕ ಮತ್ತು ಹಿಂದುಳಿದ ಮಹಿಳೆಯರಿಗೆ ಉದ್ಯಮಶೀಲತೆ ಮತ್ತು ಸಮಗ್ರ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಮೂಲಕ ಸುಸ್ಥಿರ ಅಭಿವೃದ್ಧಿ ಗುರಿ (SDG) 8 (ಯೋಗ್ಯ ಕೆಲಸ ಮತ್ತು ಆರ್ಥಿಕ ಬೆಳವಣಿಗೆ) ಗೆ ಕೊಡುಗೆ ನೀಡುತ್ತದೆ. ರಾಷ್ಟ್ರೀಯ ನಗರ ಜೀವನೋಪಾಯ ಮಿಷನ್‌ನೊಂದಿಗೆ ಹೊಂದಿಕೊಂಡಿರುವ ಈ ಉಪಕ್ರಮವು ಸಮುದಾಯ ಸಜ್ಜುಗೊಳಿಸುವಿಕೆ ಮತ್ತು ಕೌಶಲ್ಯ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತದೆ ಮತ್ತು ಕೌಶಲ್ಯ ಭಾರತ, ಸ್ಟಾರ್ಟ್‌ಅಪ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಅಭಿಯಾನದಂತಹ ಪ್ರಮುಖ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.

**ಬೆಳವಣಿಗೆ ಮತ್ತು ಸಾಧನೆಗಳು :**

ಪ್ರಾರಂಭಿಕ ಹಂತದಲ್ಲಿ ಆದಾಯ ಸೀಮಿತವಾಗಿದ್ದರೂ, ಈ ಮುಂದಾಳತ್ವವು ಚಹಾ, ಉಪಹಾರ ಮತ್ತು ಮಧ್ಯಾಹ್ನದ ಊಟವನ್ನು ಒಳಗೊಂಡ ಸರಳ ಮೆನುದೊಂದಿಗೆ ಆರಂಭಗೊಂಡು, ದಿನನಿತ್ಯದ ಕಾರ್ಯಾಚರಣೆಗಳನ್ನು ನಿರ್ವಹಿಸಲು ಸೀಮಿತ ಆದಾಯವನ್ನು ಗಳಿಸಿತು. ಮುಂದಾಳತ್ವವು ವೇಗಗೊಳ್ಳುತ್ತಿದ್ದಂತೆ, ಮಹಿಳಾ ತರಬೇತಿಗಾರರು ಆಹಾರದ ಗುಣಮಟ್ಟ, ಪೌಷ್ಟಿಕತೆ ಮತ್ತು ಪ್ರಾಮಾಣಿಕತೆಯನ್ನು ಹೆಚ್ಚಿಸುವುದರ ಮೇಲೆ ಗಮನ ಕೇಂದ್ರೀಕರಿಸಿದರು. ಅವರು ಬಹುಧಾನ್ಯ ಹಿಟ್ಟು, ಸಿರಿಧಾನ್ಯಗಳು ಹಾಗೂ ಕಡಲೆ ಹಿಟ್ಟನ್ನು ಪ್ರತಿದಿನ ತಾಜಾ ರೀತಿಯಲ್ಲಿ ಬಳಸುವಂತಹ ವಿಧಾನಗಳನ್ನು ಅಳವಡಿಸಿಕೊಂಡು, ಪ್ರಾದೇಶಿಕ ವೈವಿಧ್ಯತೆ ನೀಡುವ ಸಾಂಪ್ರದಾಯಿಕ ಪಾಕವಿಧಾನಗಳನ್ನು ಸೇರಿಸುವಂತಹ ವಿಧಾನಗಳನ್ನು ಅಭ್ಯಾಸಗಳನ್ನು ಪರಿಚಯಿಸಿದರು. ಕಾಲಕ್ರಮೇಣ, ಮೆನು ಉಪಹಾರ, ಮಧ್ಯಾಹ್ನದ ಊಟ, ಉಪಹಾರ ತಿಂಡಿಗಳು ಮತ್ತು ಚಹಾವರೆಗೆ ವಿಸ್ತರಿಸಲ್ಪಟ್ಟಿದ್ದು, ಅಗತ್ಯವಿದ್ದಲ್ಲಿ ರಾತ್ರಿ ಭೋಜನವನ್ನೂ ಒದಗಿಸಲಾಗುತ್ತಿದೆ.

ಕೂಪ್ ಕಿಚನ್‌ನ ಬೆಳವಣಿಗೆಯ ಪಥದಲ್ಲಿ ಪ್ರಮುಖ ಮೈಲುಗಲ್ಲುಗಳಲ್ಲಿ ಒಂದಾಗಿ, ಅದು ತನ್ನ ಸ್ಥಾಪನೆಯ ಕೇವಲ ಹದಿನೈದು ದಿನಗಳೊಳಗೆ ನ್ಯಾಷನಲ್ ಕೋ-ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ (ಎನ್‌ಸಿಯುಐ) ಮೇಳದಲ್ಲಿ ರಾಷ್ಟ್ರೀಯ ಮಟ್ಟದ ಭಾಗವಹಿಸುವವರಿಗಾಗಿ ಸಂಪೂರ್ಣ ಕೇಟರಿಂಗ್ ಸೇವೆಗಳನ್ನು ಒದಗಿಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ಸಾಧಿಸಿತು. ಈ ಕಾರ್ಯಕ್ರಮದ ಅವಧಿಯಲ್ಲಿ ಮಹಿಳೆಯರು ಎಲ್ಲಾ ಊಟಗಳನ್ನೂ ಯಶಸ್ವಿಯಾಗಿ ನಿರ್ವಹಿಸಿ, 3.5 ಲಕ್ಷ ಮೌಲ್ಯದ ತಮ್ಮ ಮೊದಲ ದೊಡ್ಡ ಸಂಸ್ಥಾತ್ಮಕ ಕೇಟರಿಂಗ್ ಆರ್ಡರ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದರು. ಈ ಕಾರ್ಯದ ವೃತ್ತಿಪರ ನಿರ್ವಹಣೆ ಸದಸ್ಯರ ಆತ್ಮವಿಶ್ವಾಸವನ್ನು ಗಣನೀಯವಾಗಿ ಹೆಚ್ಚಿಸುವುದರ ಜೊತೆಗೆ, ವಿಶ್ವಾಸಾರ್ಹ ಸೇವಾ ಒದಗಿಸುವ ಸಂಸ್ಥೆಯಾಗಿ ಕೂಪ್ ಕಿಚನ್‌ನ ವಿಶ್ವಾಸಾರ್ಹತೆಯನ್ನು ಸ್ಥಾಪಿಸಿತು.

ಈ ಯಶಸ್ಸಿನ ಮೇಲೆ, ಕೂಪ್ ಕಿಚನ್ ಬೆಳೆಯುತ್ತಲೇ ಇತ್ತು, ಹತ್ತಿರದ ಕಚೇರಿಗಳಿಂದ ಹೆಚ್ಚುತ್ತಿರುವ ಬೇಡಿಕೆಗೆ ಪ್ರತಿಕ್ರಿಯೆಯಾಗಿ ಅದರ ಮೆನು ಮತ್ತು ಕಾರ್ಯಾಚರಣೆಗಳನ್ನು ವಿಸ್ತರಿಸಿತು ಮತ್ತು ನಿರಂತರವಾಗಿ ಸಕಾರಾತ್ಮಕ ಪ್ರತಿಕ್ರಿಯೆಯನ್ನು ಪಡೆಯಿತು. ಅಂದಿನಿಂದ, ಈ ಉಪಕ್ರಮವು ಬಹು ಸಾಂಸ್ಥಿಕ ಅಡುಗೆ ನಿಯೋಜನೆಗಳನ್ನು ಕೈಗೊಂಡಿದೆ, ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟದ ಭಾರತ ಲಿಮಿಟೆಡ್ (NCCF), ರಾಷ್ಟ್ರೀಯ ಸಹಕಾರಿ ತರಬೇತಿ ಮಂಡಳಿ (NCCT), ಗೋದಾಮು ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ (WDRA) ನಂತಹ ಸಂಸ್ಥೆಗಳ ಉದ್ಯೋಗಿಗಳಿಗೆ ಊಟದ ಸೌಲಭ್ಯಗಳನ್ನು ಒದಗಿಸುತ್ತದೆ. ಇದರ ಜೊತೆಗೆ, ಕೂಪ್ ಕಿಚನ್ ಹಿಂದಿ ದಿವಸ್, ನಿವೃತ್ತಿ ಕಾರ್ಯಗಳು, ಕೂಪ್ ಕನೆಕ್ಟ್, ಅಧಿವೇಶನಗಳು, ಸಹಕಾರಿ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕೇಂದ್ರ (NCCE) ಕಾರ್ಯಕ್ರಮಗಳು ಮತ್ತು ಸಾಮಾನ್ಯ ಮಂಡಳಿ ಸಭೆಗಳು ಸೇರಿದಂತೆ ನ್ಯಾಷನಲ್ ಕೋ-ಆಪರೇಟಿವ್ ಯೂನಿಯನ್ ಆಫ್ ಇಂಡಿಯಾ (ಎನ್‌ಸಿಯುಐ)ನಲ್ಲಿ ಪ್ರಮುಖ ಕಾರ್ಯಕ್ರಮಗಳಲ್ಲಿಯೂ ಸಹ ಪ್ರಮುಖ ಪಾತ್ರ ವಹಿಸಿದೆ.

2023ರಿಂದ 2025ರ ಅವಧಿಯಲ್ಲಿ, ಕೂಪ್ ಕಿಚನ್ ಸ್ಥಿರವಾಗಿ ಬೆಳವಣಿಗೆ ಸಾಧಿಸಿದ್ದು, ದಿನನಿತ್ಯದ ಆದಾಯವು ಆರಂಭಿಕ 1,500, ,2,000 ರಿಂದ ಕ್ರಮೇಣ ಹೆಚ್ಚಾಗಿ ಸತತವಾಗಿ 10,000 ರ ಮಟ್ಟವನ್ನು ತಲುಪಿದೆ. ಈ ಬೆಳವಣಿಗೆಯ ಹಂತದ ನಂತರ, ಕೂಪ್ ಕಿಚನ್ ತನ್ನ ಸೇವೆಗಳನ್ನು ಇನ್ನಷ್ಟು ವಿಸ್ತರಿಸಿ ವೈವಿಧ್ಯಗೊಳಿಸುವ ದಿಕ್ಕಿನಲ್ಲಿ ಮುಂದುವರಿದಿದೆ.

ಇದು ಜಿಐಝೆಡ್ (ಜರ್ಮನ್ ಫೆಡರಲ್ ಸರ್ಕಾರದ ಅಂತರರಾಷ್ಟ್ರೀಯ ಅಭಿವೃದ್ಧಿ ಸಹಕಾರ ಸಂಸ್ಥೆ)ಗೆ ಪ್ರತಿದಿನ 10-15 ಮಧ್ಯಾಹ್ನದ ಟಿಫಿನ್‌ಗಳನ್ನು ಪೂರೈಸುವ ಟಿಫಿನ್ ಸೇವೆಯನ್ನು ಪರಿಚಯಿಸಿತು. ಈ ಸೇವೆಯ ಮೂಲಕ ಜಿಐಝೆಡ್‌ನ ನೌಕರರಿಗೆ ಪೌಷ್ಟಿಕ ಮತ್ತು ಸ್ವಚ್ಛವಾಗಿ ತಯಾರಿಸಲಾದ ಆಹಾರವನ್ನು ಒದಗಿಸಲಾಗುತ್ತಿದೆ.

ಈ ಸೇವೆಗಳ ಮೂಲಕ, ಸಹಕಾರಿಯು ಅನುಕೂಲಕರ ಮತ್ತು ಉತ್ತಮ ಗುಣಮಟ್ಟದ ಆಹಾರ ಆಯ್ಕೆಗಳನ್ನು ನೀಡುವಾಗ ಆರೋಗ್ಯಕರ, ಮನೆಯಲ್ಲಿ ತಯಾರಿಸಿದ ಊಟಕ್ಕಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪರಿಣಾಮಕಾರಿಯಾಗಿ ಪೂರೈಸುತ್ತದೆ. ಈ ಉಪಕ್ರಮಗಳು ಗ್ರಾಹಕರ ತೃಪ್ತಿಯನ್ನು ಖಚಿತಪಡಿಸುವುದಲ್ಲದೆ, ಮಹಿಳಾ ಸದಸ್ಯರಿಗೆ ಅರ್ಥಪೂರ್ಣ ಉದ್ಯೋಗ ಮತ್ತು ಕೌಶಲ್ಯ ಅಭಿವೃದ್ಧಿ ಅವಕಾಶಗಳನ್ನು ಸೃಷ್ಟಿಸುತ್ತವೆ, ಸಹಕಾರಿಯ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮವನ್ನು ಬಲಪಡಿಸುತ್ತವೆ. ಕೂಪ್ ಕಿಚನ್‌ನ ಪ್ರಯಾಣದಲ್ಲಿ ಮತ್ತೊಂದು ಪ್ರಮುಖ ಮುನ್ನಡೆಯಾಗಿದ್ದು, ಎಚ್‌ಸಿಎಲ್ ಇ-ಹಾಟ್, ದಿವ್ಯ ಕಲಾ ಮೇಳ ಮತ್ತು ಭಾರತೀಯ ನದಿ ಪರಿಷತ್ ಮುಂತಾದ ಪ್ರಮುಖ ಕಾರ್ಯಕ್ರಮಗಳಿಗೆ ಕೇಟರಿಂಗ್ ಸೇವೆಗಳನ್ನು ಒದಗಿಸಲು ಆಯ್ಕೆಗೊಳ್ಳುವುದಾಗಿದೆ. ಪ್ರತಿ ಕಾರ್ಯಕ್ರಮದಲ್ಲಿ 400 ರಿಂದ 650 ಆರ್ಡರ್‌ಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಈ ಸಹಕಾರಿ, ಒಟ್ಟಾರೆ 1.95 ಲಕ್ಷ ಆದಾಯವನ್ನು ಗಳಿಸಿತು. ಈ ಯಶಸ್ಸಿನ ಆಧಾರದ ಮೇಲೆ, ಏಪ್ರಿಲ್ ತಿಂಗಳಲ್ಲಿ ಸುಮಾರು 600 ಮಧ್ಯಾಹ್ನದ ಊಟ ಮತ್ತು ಉಪಹಾರ ಆರ್ಡರ್‌ಗಳನ್ನು ಪೂರೈಸುವಂತೆ ಕೂಪ್ ಕಿಚನ್‌ಗೆ ಅಂತರರಾಷ್ಟ್ರೀಯ ಕೇಟರಿಂಗ್ ಜವಾಬ್ದಾರಿಯೂ ಲಭಿಸಿದೆ. ಅಂತರರಾಷ್ಟ್ರೀಯ ಅಡುಗೆ ನಿಯೋಜನೆಯು ಕೋಪ್ ಕಿಚನ್‌ನ ಬೆಳೆಯುತ್ತಿರುವ ವಿಶ್ವಾಸಾರ್ಹತೆ, ಉತ್ತಮ ವೃತ್ತಿಪರ ಸಾಮರ್ಥ್ಯ ಮತ್ತು ದೊಡ್ಡ ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಸೇವೆಗಳನ್ನು ನೀಡುವ ಜಾಗತಿಕ ಮನ್ನಣೆಯನ್ನು ಪ್ರತಿಬಿಂಬಿಸುತ್ತದೆ.

ಈ ಸಾಬೀತಾದ ಸಾಮರ್ಥ್ಯಗಳ ಆಧಾರದ ಮೇಲೆ, ದೀರ್ಘಕಾಲಿಕ ಸ್ಥಿರತೆ ಮತ್ತು ಸಬಲೀಕರಣಕ್ಕೆ ಬದ್ಧವಾದ ಮಹಿಳಾ ನೇತೃತ್ವದ ಸಹಕಾರಿಯಾಗಿ 'ಸಂಕಲ್ಪ ಬಹುಉದ್ದೇಶ ಸಹಕಾರಿ ಸಂಘ'ವನ್ನು ಸ್ಥಾಪಿಸಲಾಯಿತು. ದೆಹಲಿ ಸಹಕಾರಿ ಸಂಘಗಳ ನೋಂದಣಾಧಿಕಾರಿಗಳ ಅಡಿಯಲ್ಲಿ ಅಧಿಕೃತವಾಗಿ ನೋಂದಾಯಿಸಲ್ಪಟ್ಟಿರುವ ಈ ಸಹಕಾರಿಯಲ್ಲಿ 30 ಸಕ್ರಿಯ ಸದಸ್ಯರಿದ್ದು, ಕೇಟರಿಂಗ್ ಸೇವೆಗಳು ಮತ್ತು ಇತರ ಸಮುದಾಯ ಕೇಂದ್ರೀಕೃತ ಮುಂದಾಳತ್ವಗಳ ಮೂಲಕ ಸ್ಥಿರ ಮತ್ತು ವಿಶ್ವಾಸಾರ್ಹ ಸಹಕಾರಿ ಪರಿಸರವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ.

**ಕೋಪ್ ಕಿಚನ್: ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಪ್ರೇರಕವಾಗಿದೆ:**

ಕೂಪ್ ಕಿಚನ್ ತನ್ನ ಸದಸ್ಯರಲ್ಲಿ ಸಮಗ್ರ ಸಬಲೀಕರಣವನ್ನು ಉತ್ತೇಜಿಸುವ ರೂಪಾಂತರಕಾರಿ ಮುಂದಾಳತ್ವವಾಗಿ ಹೊರಹೊಮ್ಮಿದೆ. ಶ್ರೀಮತಿ ಸಂಗೀತಾ, ಶ್ರೀಮತಿ ರೂಬಿ, ಶ್ರೀಮತಿ ಸುನೀತಾ, ಶ್ರೀಮತಿ ಮಿಥು, ಶ್ರೀಮತಿ ರೇಣು, ಶ್ರೀಮತಿ ಅಪರ್ಣಾ ಮತ್ತು ಶ್ರೀಮತಿ ಸುಜಾತಾ ಅವರಂತಹ ಸದಸ್ಯರುಗಳಲ್ಲಿ ಕಂಡುಬರುವ ವೈಯಕ್ತಿಕ ಹಾಗೂ ವೃತ್ತಿಪರ ಬೆಳವಣಿಗೆಯ ಮೂಲಕ ಈ ಪ್ರಭಾವ ಸ್ಪಷ್ಟವಾಗಿ ಪ್ರತಿಫಲಿಸುತ್ತದೆ. ಈ ರೂಪಾಂತರವು ಸದಸ್ಯರ ಅಭಿವೃದ್ಧಿಯ ಅನೇಕ ಆಯಾಮಗಳಲ್ಲಿ ವ್ಯಕ್ತವಾಗಿದ್ದು, ವಿಶೇಷವಾಗಿ ಕೆಳಕಂಡ ಅಂಶಗಳಲ್ಲಿ ಗಮನಾರ್ಹವಾಗಿದೆ:

1. **ಸಬಲೀಕರಣ** : ಗೃಹಿಣಿಗಳಾಗಿದ್ದು, ಸಾರ್ವಜನಿಕ ಪಾತ್ರಗಳು ಸೀಮಿತವಾಗಿದ್ದ ಸದಸ್ಯರು, ತಮ್ಮ ಪ್ರಯತ್ನಗಳನ್ನು ಗೌರವಿಸುವ ಕೆಲಸದ ಸ್ಥಳಕ್ಕೆ ಸಕ್ರಿಯ ಕೊಡುಗೆ ನೀಡುವವರಾಗಿ ಪರಿವರ್ತನೆಗೊಂಡಿದ್ದಾರೆ. ಈ ಅನುಭವವು ಅವರ ಆತ್ಮವಿಶ್ವಾಸವನ್ನು ಬಲಪಡಿಸಿದೆ ಮತ್ತು ಅವರ ಕುಟುಂಬಗಳು ಮತ್ತು ಸಮುದಾಯಗಳಲ್ಲಿ ಅವರಿಗೆ ಹೆಚ್ಚಿನ ಗುರುತನ್ನು ಮತ್ತು ಗೌರವವನ್ನು ನೀಡಿದೆ. ಈ ಉಪಕ್ರಮದಲ್ಲಿ ಅವರ ಪಾಲ್ಗೊಳ್ಳುವಿಕೆ ಅವರ ಅಭಿಪ್ರಾಯಗಳನ್ನು ಪ್ರತಿಪಾದಿಸಲು ಮತ್ತು ಕುಟುಂಬ ನಿರ್ಧಾರಗಳಲ್ಲಿ ಭಾಗವಹಿಸಲು ಸಹಾಯ ಮಾಡಿದೆ, ಇದು ಸಬಲೀಕರಣ ಮತ್ತು ಸಾಮಾಜಿಕ ಸೇರ್ಪಡೆಯನ್ನು ಪ್ರತಿಬಿಂಬಿಸುತ್ತದೆ.
2. **ಸ್ವಾವಲಂಬನೆ :** ಕೂಪ್ ಕಿಚನ್ ಸದಸ್ಯರು ಕಿಚನ್ ಕಾರ್ಯಾಚರಣೆಗಳನ್ನು ನಿರ್ವಹಿಸುವ, ಸ್ವಚ್ಛತೆ ಮಾನದಂಡಗಳನ್ನು ಕಾಪಾಡುವ ಮತ್ತು ಗ್ರಾಹಕರಿಗೆ ಸೇವೆ ನೀಡುವ ನೈಪುಣ್ಯಗಳಲ್ಲಿ ಪ್ರಾಯೋಗಿಕ ಅನುಭವವನ್ನು ಗಳಿಸಿದ್ದಾರೆ, ಇದು ನೇರವಾಗಿ ಅವರ ಆರ್ಥಿಕ ಸ್ವಾವಲಂಬನೆಗೆ ಸಹಕಾರಿಯಾಗಿದೆ. ನಿರಂತರ ಆದಾಯ ಗಳಿಸುವ ಸಾಮರ್ಥ್ಯವು ಅವರ ಇತರರ ಮೇಲೆ ಇರುವ ಅವಲಂಬನೆಯನ್ನು ಕಡಿಮೆ ಮಾಡಿದ್ದಷ್ಟೇ ಅಲ್ಲ, ತಮ್ಮ ಆರ್ಥಿಕ ಅಗತ್ಯಗಳನ್ನು ಸ್ವತಃ ನಿರ್ವಹಿಸುವ ಆತ್ಮವಿಶ್ವಾಸವನ್ನು ಸಹ ನೀಡಿದೆ. ಈ ಸ್ವಾವಲಂಬನೆಯ ಭಾವನೆ ಅವರ ಪ್ರೇರಣೆ, ಶಿಸ್ತು ಮತ್ತು ವೈಯಕ್ತಿಕ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವಪೂರ್ಣವಾಗಿದೆ.
3. **ಸಾಮಾಜಿಕ–ಆರ್ಥಿಕ ಅಭಿವೃದ್ಧಿ :** ವೈಯಕ್ತಿಕ ಲಾಭಗಳ ಹೊರತಾಗಿ, ಕೂಪ್ ಕಿಚನ್‌ನ ಪರಿಣಾಮವು ಸದಸ್ಯರ ಕುಟುಂಬಗಳ ಜೀವನಮಟ್ಟದ ಉತ್ತಮತೆಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಉತ್ತಮ ಆರ್ಥಿಕ ಸ್ಥಿರತೆಯೊಂದಿಗೆ, ಅವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಹೂಡಿಕೆಯನ್ನು ಮಾಡಬಹುದಾಗಿದೆ.
4. ಪೋಷಣೆ ಮತ್ತು ಯೋಗಕ್ಷೇಮ: ಈ ಉಪಕ್ರಮವು ಈ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನವನ್ನು ಉನ್ನತೀಕರಿಸಲು, ಮನೆ ಮತ್ತು ಸಮುದಾಯ ಮಟ್ಟದಲ್ಲಿ ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸಲು ವೇಗವರ್ಧಕವಾಗಿದೆ. ಮಹಿಳೆಯರಿಗೆ ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ಉತ್ತೇಜಿಸುವಲ್ಲಿ ಸಾಮೂಹಿಕ ಪ್ರಯತ್ನಗಳು ಮತ್ತು ಸಹಕಾರಿ ಮಾದರಿಗಳ ಮಹತ್ವದ ಪಾತ್ರವನ್ನು ಇದು ಬಿಂಬಿಸುತ್ತದೆ.
5. **ಉದ್ಯಮಶೀಲತೆ ಕೌಶಲ್ಯಗಳು:** ಕೂಪ್ ಕಿಚನ್ ತನ್ನ ಮಹಿಳಾ ಸದಸ್ಯರಲ್ಲಿ ಉದ್ಯಮಶೀಲತೆ ಕೌಶಲ್ಯಗಳನ್ನು ರೂಪಿಸಲು ಪ್ರಮುಖ ವೇದಿಕೆಯಾಗಿದೆ. ಮೆನು ಯೋಜನೆ, ಪದಾರ್ಥಗಳ ಖರೀದಿ, ಸ್ವಚ್ಛತೆಯನ್ನು ಕಾಯ್ದುಕೊಳ್ಳುವುದು, ಲೆಕ್ಕಪತ್ರ ನಿರ್ವಹಣೆ ಮತ್ತು ಗ್ರಾಹಕರೊಂದಿಗೆ ಸಂವಹನ ಮುಂತಾದ ದಿನನಿತ್ಯದ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಸದಸ್ಯರು ವ್ಯವಹಾರವನ್ನು ನಿರ್ವಹಿಸುವ ಪ್ರಾಯೋಗಿಕ ಅನುಭವವನ್ನು ಗಳಿಸಿದ್ದಾರೆ. ಈ ನೈಜ ಜಾಗತಿಕ ಹೊಣೆಗಾರಿಕೆಗಳು ಅವರಿಗೆ ನಾಯಕತ್ವ, ಸಮಸ್ಯೆ ಪರಿಹಾರ ಮತ್ತು ನಿರ್ಧಾರಾತ್ಮಕ ಶಕ್ತಿ ಮುಂತಾದ ಅಗತ್ಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡಿವೆ. ಎನ್‌ಸಿಯುಐ ನೀಡಿದ ಬೆಂಬಲ ಮತ್ತು ಸಾಮರ್ಥ್ಯ–ನಿರ್ಮಾಣ ಉಪಕ್ರಮಗಳೊಂದಿಗೆ, ಅನೇಕ ಸದಸ್ಯರು ಮಾರ್ಗದರ್ಶನ ಪಾತ್ರಗಳನ್ನು ತೆಗೆದುಕೊಳ್ಳುವ ವಿಶ್ವಾಸವನ್ನು ಬೆಳೆಸಿಕೊಂಡಿದ್ದಾರೆ, ಇತರ ಮಹಿಳೆಯರು ತಮ್ಮದೇ ಆದ ಉದ್ಯಮಶೀಲ ಪ್ರಯಾಣಗಳನ್ನು ಪ್ರಾರಂಭಿಸಲು ಸಹಾಯ ಮಾಡುತ್ತಾರೆ. ಕಲಿಯುವವರಿಂದ ನಾಯಕಿಯರಾಗುವ ಈ ರೂಪಾಂತರವು ಮಹಿಳಾ ನೇತೃತ್ವದ ಉದ್ಯಮಶೀಲತೆಗೆ ಬಲವಾದ ಅಡಿಪಾಯವನ್ನು ರಚಿಸುವಲ್ಲಿ ಉಪಕ್ರಮದ ಯಶಸ್ಸನ್ನು ಪ್ರತಿಬಿಂಬಿಸುತ್ತದೆ. ಕೂಪ್ ಕಿಚನ್ ತನ್ನ ಸದಸ್ಯರನ್ನು ಪರಿಣಾಮಕಾರಿಯಾಗಿ ಕಾರ್ಯಾಚರಣೆಗೆ ಅನುವು ಮಾಡಿಕೊಟ್ಟಿದ್ದು ಮಾತ್ರವಲ್ಲದೆ, ಇತರ ಮಹಿಳೆಯರು ಸ್ವಯಂ–ಪ್ರಾರಂಭಿಕರಾಗಲು ಮತ್ತು ತಮ್ಮದೇ ಆದ ಸುಸ್ಥಿರ ಜೀವನೋಪಾಯವನ್ನು ನಿರ್ಮಿಸಲು ಬೆಂಬಲ ಮತ್ತು ಸ್ಫೂರ್ತಿ ನೀಡಿದೆ.
6. **ಕೂಪ್ ಕಿಚನ್ ಫಲಾನುಭವಿಗಳಿಂದ ಪ್ರಶಂಸಾಪತ್ರಗಳು:** ಕೂಪ್ ಕಿಚನ್ ತನ್ನ ಸದಸ್ಯರ ಸಮರ್ಪಣೆ ಮತ್ತು ಕಠಿಣ ಪರಿಶ್ರಮ, ಚಿಂತನಶೀಲವಾಗಿ ಸಂಗ್ರಹಿಸಲಾದ ಮೆನುಗಳು, ಸಕಾಲಿಕ ಸೇವಾ ವಿತರಣೆ ಮತ್ತು ನೈರ್ಮಲ್ಯ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಿಂದ ವ್ಯಾಪಕ ಮೆಚ್ಚುಗೆಯನ್ನು ಗಳಿಸಿದೆ. ಕಾಲಾನಂತರದಲ್ಲಿ, ಅದರ ಬೆಳೆಯುತ್ತಿರುವ ಖ್ಯಾತಿಯು ಸುತ್ತಮುತ್ತಲಿನ ಪ್ರದೇಶಗಳಿಂದ ಗ್ರಾಹಕರನ್ನು ಆಕರ್ಷಿಸಿದೆ, ಅವರು ಆಹಾರದ ಗುಣಮಟ್ಟ ಮತ್ತು ರುಚಿಯನ್ನು ಮಾತ್ರವಲ್ಲದೆ ಅದು ನೀಡುವ ಒಟ್ಟಾರೆ ಊಟದ ಅನುಭವವನ್ನೂ ಗೌರವಿಸುತ್ತಾರೆ. ಯೂನಿಯನ್ ಬ್ಯಾಂಕ್ ಮತ್ತು ಎನ್‌ಸಿಸಿ ಸಂಸ್ಥೆಯ ಹಲವಾರು ಫಲಾನುಭವಿಗಳು ತಮ್ಮದೇ ಆದ ಕ್ಯಾಂಟೀನ್‌ನಲ್ಲಿ ಊಟ ಸೇವೆಗಳನ್ನು ನೀಡಿದಾಗಲೂ, ಅದರ ಅಸಾಧಾರಣ ರುಚಿ ಮತ್ತು ಆರೋಗ್ಯಕರ ತಯಾರಿಕೆಯಿಂದಾಗಿ ಇಲ್ಲಿ ತಯಾರಿಸಿದ ಅದ್ಭುತ ಊಟವನ್ನು ಆನಂದಿಸಲು ಅವರು

ಕೋಪ್ ಕಿಚನ್‌ಗೆ ಬರಲು ಬಯಸುತ್ತಾರೆ ಎಂದು ಹಂಚಿಕೊಂಡರು. ತಂಡದ ಶಿಸ್ತುಬದ್ಧ ಕೆಲಸದ ನೀತಿ, ತ್ವರಿತ ಸೇವೆ ಮತ್ತು ಸ್ಥಿರವಾದ ನೈರ್ಮಲ್ಯ ಪರಿಸ್ಥಿತಿಗಳ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಕನಿಷ್ಠ ಮಸಾಲೆಗಳ ಬಳಕೆಯು ಆಹಾರವನ್ನು ವಿಶಿಷ್ಟ ರೆಸ್ಟೋರೆಂಟ್ ಕೊಡುಗೆಗಳಿಗೆ ಹೋಲಿಸಿದರೆ ಹಗುರ, ಆರೋಗ್ಯಕರ ಮತ್ತು ಹೆಚ್ಚು ಆಕರ್ಷಕವಾಗಿಸುತ್ತದೆ, ಅದರ ಪೌಷ್ಟಿಕಾಂಶದ ಮೌಲ್ಯ ಮತ್ತು ಒಟ್ಟಾರೆ ಸ್ವೀಕಾರಾರ್ಹತೆಯನ್ನು ಹೆಚ್ಚಿಸುತ್ತದೆ ಎಂದು ಫಲಾನುಭವಿಗಳು ತಿಳಿಸಿದ್ದಾರೆ. ಕೂಪ್ ಕಿಚನ್‌ನ ಜನಪ್ರಿಯತೆಯು ಈಗ ರಾಷ್ಟ್ರೀಯ ಗಡಿಗಳನ್ನು ದಾಟಿದೆ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್‌ನಂತಹ ದೇಶಗಳಿಂದ ಅಂತರರಾಷ್ಟ್ರೀಯ ಗ್ರಾಹಕರನ್ನು ಆಕರ್ಷಿಸುತ್ತಿದೆ. ಕೂಪ್ ಕಿಚನ್‌ನಲ್ಲಿ ನೀಡಲಾಗುವ ಆಹಾರದ ಸರಳತೆ ಮತ್ತು ಆರೋಗ್ಯ ಸ್ನೇಹಿ ಸ್ವರೂಪವನ್ನು ಆಸ್ಟ್ರೇಲಿಯಾದ ಫಲಾನುಭವಿಗಳು ಮೆಚ್ಚಿಕೊಂಡಿದ್ದಾರೆ, ಜೊತೆಗೆ ಅದರ ಪೌಷ್ಟಿಕ ಮತ್ತು ತೃಪ್ತಿಕರ ಗುಣಗಳನ್ನು ಮೆಚ್ಚಿಕೊಂಡಿದ್ದಾರೆ. ಈ ಪ್ರತಿಕ್ರಿಯೆಯು ಕೂಪ್ ಕಿಚನ್‌ನ ಗುಣಮಟ್ಟ, ನೈರ್ಮಲ್ಯ ಮತ್ತು ಗ್ರಾಹಕರ ತೃಪ್ತಿಗೆ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ, ಇದು ಸಮುದಾಯ–ಚಾಲಿತ, ಮಹಿಳಾ ನೇತೃತ್ವದ ಪಾಕಶಾಲೆಯ ಉಪಕ್ರಮಗಳಿಗೆ ಮಾದರಿಯಾಗಿ ಸ್ಥಾಪಿಸುತ್ತದೆ.

**ಭವಿಷ್ಯದ ಉದ್ದೇಶಗಳು:** ಕೂಪ್ ಕಿಚನ್ ಮಹಿಳೆಯರಿಗೆ ಹೊಂದಿಕೊಳ್ಳುವ ಮತ್ತು ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವತ್ತ ಗಮನಹರಿಸಿ ತನ್ನ ಸೇವೆಗಳನ್ನು ಮತ್ತಷ್ಟು ವಿಸ್ತರಿಸಲು ಮತ್ತು ವೈವಿಧ್ಯಗೊಳಿಸಲು ಯೋಜಿಸಿದೆ. ಈ ಉಪಕ್ರಮದ ಭಾಗವಾಗಿ, ಸಹಕಾರಿಯು ತನ್ನ ಟಿಫಿನ್ ಸೇವೆಯನ್ನು ಹೆಚ್ಚಿಸಲು, ದೈನಂದಿನ ಪೂರೈಕೆಯನ್ನು 10–15 ಟಿಫಿನ್‌ಗಳಿಂದ 30 ಕ್ಕೆ ಹೆಚ್ಚಿಸಲು ಮತ್ತು ಹೆಚ್ಚುವರಿ ಸಂಸ್ಥೆಗಳು ಮತ್ತು ಸಂಸ್ಥೆಗಳ ಉದ್ಯೋಗಿಗಳಿಗೆ ಸೇವೆಯನ್ನು ವಿಸ್ತರಿಸಲು ಗುರಿಯನ್ನು ಹೊಂದಿದೆ. ಇದರ ಜೊತೆಗೆ, ಕೂಪ್ ಕಿಚನ್ ತನ್ನ ಥಾಲಿ ಸೇವೆಗಳನ್ನು ವಿಸ್ತರಿಸಲು, ಅದರ ಸಾಮರ್ಥ್ಯವನ್ನು 30 ರಿಂದ 50 ಅಥವಾ ಹೆಚ್ಚಿನ ಉದ್ಯೋಗಿಗಳಿಗೆ ಹೆಚ್ಚಿಸಲು, ಉತ್ತಮ ಸಂಸ್ಥೆಗಳಿಗೆ ಪೂರೈಸಲು ಪ್ರಸ್ತಾಪಿಸಿದೆ. ಈ ಯೋಜಿತ ವಿಸ್ತರಣೆಗಳ ಮೂಲಕ, ಸಹಕಾರಿಯು ಅನುಕೂಲಕರ ಮತ್ತು ಉತ್ತಮ ಗುಣಮಟ್ಟದ ಆಹಾರ ಆಯ್ಕೆಗಳನ್ನು ನೀಡುವ ಮೂಲಕ ಆರೋಗ್ಯಕರ, ಮನೆಯಲ್ಲಿ ಬೇಯಿಸಿದ ಊಟಕ್ಕಾಗಿ ಹೆಚ್ಚುತ್ತಿರುವ ಬೇಡಿಕೆಗೆ ಸ್ಪಂದಿಸಲು ಪ್ರಯತ್ನಿಸುತ್ತದೆ.

ಆಹಾರ ಪೂರೈಕೆ ಸೇವೆಗಳ ಹೊರತಾಗಿ, ಕೂಪ್ ಕಿಚನ್ ಜನ್ಮದಿನಗಳು, ಮದುವೆಗಳು ಹಾಗೂ ಇತರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ವೈಯಕ್ತಿಕಗೊಳಿಸಿದ ಕೇಟರಿಂಗ್ ಸೇವೆಗಳನ್ನು ಒದಗಿಸುವ ಮೂಲಕ ತನ್ನ ಕಾರ್ಯಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸುವ ಉದ್ದೇಶ ಹೊಂದಿದೆ. ಈ ಯೋಜಿತ ವಿಸ್ತರಣೆಯಿಂದ ಸಹಕಾರಿ ಸಂಸ್ಥೆ ಸ್ಪರ್ಧಾತ್ಮಕ ಕಾರ್ಯಕ್ರಮ ಕೇಟರಿಂಗ್ ಕ್ಷೇತ್ರಕ್ಕೆ ಪ್ರವೇಶಿಸಿ, ತನ್ನ ಆದಾಯ ಮೂಲಗಳನ್ನು ವೈವಿಧ್ಯಗೊಳಿಸಿದೆ. ಗ್ರಾಹಕರ ವಿಶೇಷ ರುಚಿ, ಆಹಾರ ಸಂಬಂಧಿತ ಆಯ್ಕೆಗಳು ಮತ್ತು ಬಜೆಟ್ ಅಗತ್ಯಗಳಿಗೆ ಅನುಗುಣವಾಗಿ ರೂಪಿಸಲಾದ ವೈಯಕ್ತಿಕ ಮೆನು ಆಯ್ಕೆಗಳನ್ನು ಒದಗಿಸುವ ಮೂಲಕ, ಕೂಪ್ ಕಿಚನ್ ಮೌಲ್ಯವರ್ಧಿತ ಸೇವೆಗಳನ್ನು ನೀಡುವುದರ ಜೊತೆಗೆ ಗುಣಮಟ್ಟ, ವಿಶ್ವಾಸಾರ್ಹತೆ ಮತ್ತು ವೃತ್ತಿಪರತೆಯ ಮೇಲಿನ ತನ್ನ ಖ್ಯಾತಿಯನ್ನು ಇನ್ನಷ್ಟು ದೃಢಪಡಿಸುವ ಗುರಿ ಹೊಂದಿದೆ.

ಇದಲ್ಲದೆ, ದೆಹಲಿಯ ಆಚೆಗೆ ಅಡುಗೆ ಸೇವೆಗಳನ್ನು ವಿಸ್ತರಿಸುವ ಯೋಜನೆಗಳಿವೆ, ಇತರ ಪ್ರದೇಶಗಳಲ್ಲಿ ಹೊಸ ಮಾರುಕಟ್ಟೆಗಳನ್ನು ತಲುಪುವ ಯೋಜನೆಗಳಿವೆ. ಈ ವಿಸ್ತರಣೆಯು ಕಾರ್ಯಾಚರಣೆಗಳ ವ್ಯಾಪ್ತಿಯನ್ನು ಹೆಚ್ಚಿಸುವುದಲ್ಲದೆ, ಮಹಿಳೆಯರಿಗೆ ಅಡುಗೆ ಉದ್ಯಮದಲ್ಲಿ ತೊಡಗಿಸಿಕೊಳ್ಳಲು ಹೆಚ್ಚಿನ ಅವಕಾಶಗಳನ್ನು ದೊರೆತಂತಾಗುತ್ತದೆ. ಈವೆಂಟ್ ಯೋಜನೆ, ನಿರ್ವಹಣೆ ಮತ್ತು ಗ್ರಾಹಕ ಸೇವೆಯಲ್ಲಿ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

**ಉಪ ಸಂಹಾರ :**

ಕೂಪ್ ಕಿಚನ್‌ನ ಅನುಭವವು, ಸೂಕ್ತವಾದ ಸಾಂಸ್ಥಿಕ ಚೌಕಟ್ಟುಗಳಿಂದ ಬೆಂಬಲಿತವಾದಾಗ, ತಳಮಟ್ಟದ ಮಹಿಳಾ ಸಾಮೂಹಿಕಗಳು ಹೇಗೆ ಸುಸ್ಥಿರ ಮತ್ತು ವೃತ್ತಿಪರವಾಗಿ ನಿರ್ವಹಿಸಲ್ಪಡುವ ಉದ್ಯಮಗಳಾಗಿ ವಿಕಸನಗೊಳ್ಳಬಹುದು ಎಂಬುದನ್ನು ತೋರಿಸುತ್ತದೆ. ಸ್ವ–ಸಹಾಯ ಗುಂಪಿನ ಅಡಿಯಲ್ಲಿ ಸಣ್ಣ ಉಪಕ್ರಮವಾಗಿ ಪ್ರಾರಂಭವಾದ ಇದು ಕ್ರಮೇಣ ನೋಂದಾಯಿತ ಮಹಿಳಾ ನೇತೃತ್ವದ ಸಹಕಾರಿಯಾಗಿ ಅಭಿವೃದ್ಧಿ ಹೊಂದಿತು, ಎನ್‌ಸಿಯುಐ ಇನ್ಕ್ಯುಬೇಷನ್ ಸೆಂಟರ್ ಮೂಲಕ ಒದಗಿಸಲಾದ ಸಾಮರ್ಥ್ಯ ವೃದ್ಧಿ, ಕೌಶಲ್ಯ ತರಬೇತಿ ಮತ್ತು ಉದ್ಯಮಶೀಲತಾ ಮಾರ್ಗದರ್ಶನದಿಂದ ಬೆಂಬಲಿತವಾಗಿದೆ. ತನ್ನ ಕಾರ್ಯಾಚರಣೆಗಳನ್ನು ವಿಸ್ತರಿಸುವ, ಸಾಂಸ್ಥಿಕ ಮತ್ತು ಉನ್ನತ ಮಟ್ಟದ ಅಡುಗೆ ನಿಯೋಜನೆಗಳನ್ನು ಸುರಕ್ಷಿತಗೊಳಿಸುವ ಮತ್ತು ಸ್ಥಿರವಾಗಿ ಹೆಚ್ಚುತ್ತಿರುವ ಆದಾಯವನ್ನು ಗಳಿಸುವ ಸಹಕಾರಿಯ ಸಾಮರ್ಥ್ಯವು ಅದರ ಬೆಳೆಯುತ್ತಿರುವ ಸಾಂಸ್ಥಿಕ ಪರಿಪಕ್ವತೆ ಮತ್ತು ಮಾರುಕಟ್ಟೆ ಸ್ವೀಕಾರವನ್ನು ಪ್ರತಿಬಿಂಬಿಸುತ್ತದೆ. ಹೆಚ್ಚು ಮುಖ್ಯವಾಗಿ, ಕೂಪ್ ಕಿಚನ್‌ನ ಪ್ರಭಾವವು ಹಣಕಾಸಿನ ಕಾರ್ಯಕ್ಷಮತೆಯನ್ನು ಮೀರಿ ವಿಸ್ತರಿಸುತ್ತದೆ. ಈ ಉಪಕ್ರಮದಲ್ಲಿ ಭಾಗವಹಿಸುವಿಕೆಯು ಮಹಿಳಾ ಸದಸ್ಯರಿಗೆ ಆತ್ಮವಿಶ್ವಾಸವನ್ನು ಪಡೆಯಲು, ವ್ಯವಸ್ಥಾಪಕ ಮತ್ತು ಉದ್ಯಮಶೀಲ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ಹೆಚ್ಚಿನ ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸಲು ಅನುವು ಮಾಡಿಕೊಟ್ಟಿದೆ. ಮನೆ ಮತ್ತು ಸಮುದಾಯ ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರ ಪಾತ್ರವು ಸಹಕಾರಿ ಮಾದರಿಯಿಂದ ಸುಗಮಗೊಳಿಸಲಾದ ವಿಶಾಲ ಸಾಮಾಜಿಕ ರೂಪಾಂತರವನ್ನು ತೋರಿಸುತ್ತದೆ. ಸಂಕಲ್ಪ್ ಬಹುಪಯೋಗಿ ಸಹಕಾರಿ ಸಂಘದ ಸ್ಥಾಪನೆಯು ಸಾಂಸ್ಥಿಕ ಸ್ಥಿರತೆ, ಸಾಮೂಹಿಕ ಮಾಲೀಕತ್ವ ಮತ್ತು ದೀರ್ಘಕಾಲೀನ ಸುಸ್ಥಿರತೆಯ ಕಡೆಗೆ ಒಂದು ನಿರ್ಣಾಯಕ ಹೆಜ್ಜೆಯನ್ನು ಸೂಚಿಸುತ್ತದೆ. ಊಟ ವಿತರಣೆ, ಈವೆಂಟ್ ಅಡುಗೆ ಮತ್ತು ಭೌಗೋಳಿಕ ವಿಸ್ತರಣೆಯಲ್ಲಿ ಯೋಜಿತ ವೈವಿಧ್ಯೀಕರಣದೊಂದಿಗೆ, ಕೂಪ್ ಕಿಚನ್ ಮಹಿಳೆಯರಿಗೆ ಹೊಂದಿಕೊಳ್ಳುವ ಮತ್ತು ಗೌರವಾನ್ವಿತ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವ ತನ್ನ ಮೂಲ ಉದ್ದೇಶಕ್ಕೆ ಬದ್ಧವಾಗಿರುವುದರ ಜೊತೆಗೆ ತನ್ನ ಕಾರ್ಯಾಚರಣೆಗಳು ಉತ್ತಮ ಸ್ಥಾನದಲ್ಲಿದೆ. ಮಹಿಳಾ ನೇತೃತ್ವದ ಸಹಕಾರಿ ಉದ್ಯಮವಾಗಿ, ಇದು ಜೀವನೋಪಾಯ ಉತ್ಪಾದನೆಯನ್ನು ಸಾಮಾಜಿಕ ಸಬಲೀಕರಣದೊಂದಿಗೆ ಸಂಯೋಜಿಸುವ ಅನ್ವಯಿಸಬಹುದಾದ ಮಾದರಿಯನ್ನು ನೀಡುತ್ತದೆ, ಇದು ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಗಾಗಿ ಪರಿಣಾಮಕಾರಿ ಸಾಧನಗಳಾಗಿ ಸಹಕಾರಿ ಸಂಸ್ಥೆಗಳ ಪ್ರಸ್ತುತತೆಯನ್ನು ಬಲಪಡಿಸುತ್ತದೆ.

# ಸಣ್ಣ ಅಭ್ಯಾಸಗಳು ದೊಡ್ಡ ಬದಲಾವಣೆಗಳು

ಶ್ರೀ ಧೀರೇಂದ್ರ ನಾಗರಗಳ್ಳಿ, ಸಮಾಜ ಹಿತ ಹಾಗೂ ವ್ಯಕ್ತಿತ್ವ ವಿಕಸನ ಚಿಂತಕರು

ಹಿಂದಿನ ಭಾಗದಲ್ಲಿ ಹೇಗೆ ಸಣ್ಣ–ಸಣ್ಣ ಅಭ್ಯಾಸಗಳು ದೊಡ್ಡ ಬದಲಾವಣೆಯನ್ನು ತರುತ್ತವೆ ಎನ್ನುವುದನ್ನು ಅರ್ಥಮಾಡಿಕೊಂಡಿದ್ದೇವೆ. ಈ ಭಾಗದಲ್ಲಿ ಈ ಹಿನ್ನೆಯಲ್ಲಿರುವ ವೈಜ್ಞಾನಿಕ ಕಾರಣಗಳ ಬಗ್ಗೆ ಒಂದಿಷ್ಟು ವಿಚಾರಗಳನ್ನು ತಿಳಿದುಕೊಳ್ಳೋಣ.

ನಮ್ಮ ಜೀವನದಲ್ಲಿ ನಾವು ಮಾಡುವ ಪ್ರತಿಯೊಂದು ಕ್ರಿಯೆಯೂ ಒಂದು ರೀತಿಯ ಅಭ್ಯಾಸವಾಗಿರುತ್ತದೆ. ಕೆಲವೊಮ್ಮೆ ಅದು ಒಳ್ಳೆಯ ಅಭ್ಯಾಸ (ಉದಾಹರಣೆಗೆ, ಪ್ರತಿದಿನ ವ್ಯಾಯಾಮ), ಕೆಲವೊಮ್ಮೆ ಕೆಟ್ಟ ಅಭ್ಯಾಸ (ಉದಾಹರಣೆಗೆ, ಹೆಚ್ಚು ಸಮಯ ಮೊಬೈಲ್ನಲ್ಲಿ ಕಳೆಯುವುದು). ಮನೋವಿಜ್ಞಾನದಲ್ಲಿ ಇದನ್ನು "ಹ್ಯಾಬಿಟ್ ಲೂಪ್" ಎಂದು ಕರೆಯಲಾಗುತ್ತದೆ. ಈ "ಹ್ಯಾಬಿಟ್ ಲೂಪ್" ತತ್ವವು ಹೇಗೆ ಅಭ್ಯಾಸಗಳು ರೂಪಗೊಳ್ಳುತ್ತವೆ ಎನ್ನುವುದನ್ನು ವಿವರಿಸುತ್ತದೆ.

**ಹ್ಯಾಬಿಟ್ ಲೂಪ್ ಹೇಗೆ ಕೆಲಸ ಮಾಡುತ್ತದೆ? ಹ್ಯಾಬಿಟ್ ಲೂಪ್ ಮೂರು ಹಂತಗಳಲ್ಲಿ ನಡೆಯುತ್ತದೆ:**

1. **ಸೂಚನೆ (Cue) :** ಇದು ಅಭ್ಯಾಸವನ್ನು ಪ್ರಾರಂಭಿಸುವ ಸಂಕೇತ. ಉದಾಹರಣೆ: ಬೆಳಿಗ್ಗೆ ಎದ್ದ ಕ್ಷಣವೆ "ಈಗ ಏನಾದರೂ ಮಾಡೋಣ" ಎಂದೆನಿಸುವ ಸಮಯ.
2. **ಅಭ್ಯಾಸ (Routine) :** ಸೂಚನೆ ಬಂದಾಗ ನಾವು ಮಾಡುವ ಕ್ರಿಯೆ. ಉದಾಹರಣೆ: ಎದ್ದ ಕೂಡಲೆ ಒಂದು ಗ್ಲಾಸ್ ನೀರು ಕುಡಿಯುವುದು.
3. **ಫಲ (Reward) :** ನಿರಂತರ ಅಭ್ಯಾಸದ ನಂತರ ನಮಗೆ ಸಿಗುವ ಅನುಭವ. ಉದಾಹರಣೆ: ನೀರು ಕುಡಿದ ನಂತರದಿ ನಮ್ಮ ಆರೋಗ್ಯದಲ್ಲಾಗುವ ಬದಲಾವಣೆಗಳು (ಒಂದೆ ದಿನದಲ್ಲಿ ಯಾವುದೆ ಫಲವನ್ನು ಕೊಡುವುದಿಲ್ಲ.ಆದರೆ ಒಂದು ದಿನ ಫಲವನ್ನು ಕೊಡುತ್ತದೆ ನಾವು ನಿರಂತರತೆಯನ್ನು ಕಾಪಾಡಿಕೊಂಡಿದ್ದೆ ಆದರೆ)

ಸೂಚನೆ – ಅಭ್ಯಾಸ – ಫಲ ಈ ಮೂರು ಹಂತಗಳು ಪುನಾರವರ್ತನೆಯಿಂದ ನಡೆಯುತ್ತಾ ಇದ್ದರೆ, ಅದು ನಮ್ಮ ಜೀವನದ ಭಾಗವಾಗುತ್ತದೆ.

ಜೀವನದಲ್ಲಿ ದೊಡ್ಡ ಬದಲಾವಣೆಗಳನ್ನು ತರಬೇಕೆಂದರೆ ದೊಡ್ಡ ಹೆಜ್ಜೆಗಳು ಅಗತ್ಯವಿಲ್ಲ. ಸಣ್ಣ ಸಣ್ಣ ಅಭ್ಯಾಸಗಳು ಸಾಕು. ಬೆಳಿಗ್ಗೆ ಎದ್ದಾಗ ನೀರು ಕುಡಿಯುವುದು, ದಿನಕ್ಕೆ 5 ನಿಮಿಷ ನಡೆಯುವುದು, ರಾತ್ರಿ ಮಲಗುವ ಮುನ್ನ ಒಳ್ಳೆಯ ಘಟನೆಗಳನ್ನು ನೆನಪಿಸಿಕೊಳ್ಳುವುದು ಇಂತಹ ಚಿಕ್ಕ ಕ್ರಿಯೆಗಳು ನಮ್ಮ ಮನಸ್ಸಿಗೆ ಶಾಂತಿ, ದೇಹಕ್ಕೆ ಆರೋಗ್ಯ, ಜೀವನಕ್ಕೆ ಸಂತೋಷ ತರುತ್ತವೆ. ಆದ್ದರಿಂದ, ಇಂದು ಒಂದು ಚಿಕ್ಕ ಅಭ್ಯಾಸದಿಂದ ಆರಂಭಿಸಿ. ನಾಳೆ ಮತ್ತೊಂದು ಸೇರಿಸಿ. ಹೀಗೆ ಮುಂದುವರಿದರೆ, ಮುಂದಿನ ದಿನಗಳಲ್ಲಿ ಬಹುದೊಡ್ಡ ಬದಲಾವಣೆಯನ್ನು ನೋಡಿರುತ್ತೇವೆ.

**ಸ್ಪರ್ಧಾತ್ಮಕ ಜಗತ್ತಿನಲ್ಲಿ ಕನಸುಗಳೆ ಬುನಾದಿ**

**(ಕನಸು + ಗುರಿ + ಮನಸ್ಥಿತಿ + ಪೂರ್ವ ಸಿದ್ಧತೆ)**

ಸ್ಪರ್ಧಾತ್ಮಕ ಪರೀಕ್ಷೆ ಎಂದರೆ ಕೇವಲ ಅಂಕಗಳಿಗಾಗಿ ನಡೆಯುವ ಸ್ಪರ್ಧೆ ಅಲ್ಲ, ಅದು ಕನಸುಗಳಿಗಾಗಿ ನಡೆಯುವ ಹೋರಾಟ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜೀವನದಲ್ಲಿ ಒಂದು ಗುರಿ ಹೊಂದಿರುತ್ತಾನೆ – ಸರ್ಕಾರಿ ಉದ್ಯೋಗ, ವೈದ್ಯಕೀಯ ಪ್ರವೇಶ, ಆಡಳಿತ ಸೇವೆ, ಬ್ಯಾಂಕ್ ಉದ್ಯೋಗ ಅಥವಾ ಇನ್ನಾವುದೇ ಸಾಧನೆ. ಈ ಗುರಿ ಸಾಧಿಸಲು ಮೊದಲ ಹೆಜ್ಜೆ ಕನಸುಗಳನ್ನು ಸ್ಪಷ್ಟವಾಗಿ ನಿರ್ಧರಿಸುವುದು. ಕನಸುಗಳು ಸ್ಪಷ್ಟವಾಗಿದ್ದರೆ, ಅವುಗಳನ್ನು ಸಾಧಿಸಲು ಬೇಕಾದ ಶ್ರಮವೂ ಸ್ಪಷ್ಟವಾಗುತ್ತದೆ.

ಕನಸುಗಳು ಜೀವನಕ್ಕೆ ದಿಕ್ಕು ನೀಡುವ ಶಕ್ತಿ. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಭವಿಷ್ಯವನ್ನು ಹೇಗೆ ರೂಪಿಸಬೇಕು ಎನ್ನುವುದನ್ನು ಕನಸುಗಳ ಮೂಲಕ ನಿರ್ಧರಿಸುತ್ತಾನೆ. ಕನಸುಗಳು ಕೇವಲ ಕಲ್ಪನೆಗಳಲ್ಲ, ಅವು ನಮ್ಮನ್ನು ಮುಂದಕ್ಕೆ ಕೊಂಡೊಯ್ಯುವ ಉತ್ಸಾಹದ ಮೂಲ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವಾಗ, "ನಾನು ಏನು ಸಾಧಿಸಬೇಕು?" ಎನ್ನುವ ಪ್ರಶ್ನೆಗೆ ಸ್ಪಷ್ಟ ಉತ್ತರ ಹೊಂದಿರುವುದು ಅತ್ಯಂತ ಮುಖ್ಯ. ಗುರಿ ಎಂದರೆ ಕನಸಿಗೆ ನೀಡುವ ರೂಪ. ಕನಸುಗಳು ಸ್ಪಷ್ಟವಾಗಿದ್ದರೆ, ಅವುಗಳನ್ನು

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 34
Permitted to Post under Periodical Post as per the Letter G3/14/RNP/2024-25 DATE 29.09.2025

ಸಾಧಿಸಲು ಬೇಕಾದ ಶ್ರಮವೂ ಸ್ಪಷ್ಟವಾಗಿರುತ್ತದೆ. ಕನಸು ಮತ್ತು ಗುರಿ ಒಟ್ಟಿಗೆ ವಿದ್ಯಾರ್ಥಿಗೆ ಪ್ರೇರಣೆ ನೀಡುತ್ತವೆ. ಪ್ರತಿದಿನ ಓದಲು, ಪ್ರಯತ್ನಿಸಲು, ಹೋರಾಡಲು ಅವು ಶಕ್ತಿ ನೀಡುತ್ತವೆ. ಕನಸುಗಳು ನಮ್ಮ ಮನಸ್ಸಿನಲ್ಲಿ ಬೆಳಕು ಹಚ್ಚುವ ದೀಪದಂತೆ . ಗುರಿ ಆ ಬೆಳಕಿಗೆ ದಿಕ್ಕು ತೋರಿಸುವ ನಕ್ಷೆಯಂತೆ. ಆದ್ದರಿಂದ, ಸ್ಪರ್ಧಾತ್ಮಕ ಪರೀಕ್ಷೆಯ ಮೊದಲ ಹೆಜ್ಜೆ ಎಂದರೆ ಕನಸುಗಳನ್ನು ಸ್ಪಷ್ಟವಾಗಿ ನಿರ್ಧರಿಸಿ, ಅವುಗಳನ್ನು ಗುರಿಗಳಾಗಿ ರೂಪಿಸುವುದು.

ಕನಸುಗಳನ್ನು ಸಾಧಿಸಲು ಅಭ್ಯಾಸದ ಬುನಾದಿ ಅಗತ್ಯ. ಪ್ರತಿದಿನ ಕಲಿತ ವಿಷಯವನ್ನು ಪುನರಾವರ್ತನೆ ಮಾಡುವುದು, ಪ್ರತಿ ಅಭ್ಯಾಸದ ನಂತರದಿ ನಾವು ಮಾಡುವ ತಪ್ಪುಗಳನ್ನು ಗುರುತಿಸಿ ಸರಿಪಡಿಸುವುದು ಹಾಗೂ ನಿರಂತರ ಅಭ್ಯಾಸ ಮಾಡುವುದು ಯಶಸ್ಸಿನ ಮೂಲ. ಉದಾಹರಣೆಗೆ, UPSC ಪರೀಕ್ಷೆಗೆ ತಯಾರಿ ಮಾಡುವ ವಿದ್ಯಾರ್ಥಿ ದಿನನಿತ್ಯ Current Affairs ಓದಲೇಬೇಕು, SSLC, PU II ಪರೀಕ್ಷೆಗೆ ಸಿದ್ಧತೆ ಮಾಡುವವರು ಎಲ್ಲಾ ವಿಷಯಗಳಿಗೂ ಒಂದೇ ತೆರೆನಾದ ತೂಕವನ್ನು ಕೊಟ್ಟು ಪರೀಕ್ಷಾ ಸಮಯದಿ ಪುನಾರವರ್ತನೆ ಮಾಡಬೇಕಾಗುತ್ತದೆ. ಈ ರೀತಿಯಾಗಿ, ಗುರಿ ಸ್ಪಷ್ಟವಾಗಿದ್ದರೆ ಅಭ್ಯಾಸವೂ ಗುರಿಯತ್ತ ಕೊಂಡೊಯ್ಯುತ್ತದೆ.

ವಿದ್ಯಾರ್ಥಿಗಳು ತಮ್ಮ ಕನಸುಗಳನ್ನು ಸಾಧಿಸಲು ಸಹನೆ ಮತ್ತು ಶ್ರಮವನ್ನು ಶಸ್ತ್ರಾಸ್ತ್ರಗಳಾಗಿ ಮಾಡಿಕೊಂಡಾಗ, ಯಾವುದೆ ಅಡೆತಡೆ ಅವರನ್ನು ತಡೆಯಲು ಸಾಧ್ಯವಿಲ್ಲ. ಕನಸುಗಳು ದೊಡ್ಡದಾಗಿದ್ದರೆ ಶ್ರಮವೂ ದೊಡ್ಡದಾಗಿರಬೇಕು. ಪ್ರತಿಯೊಂದು ದಿನದ ಅಭ್ಯಾಸ, ಪ್ರತಿಯೊಂದು ಪುನರಾವರ್ತನೆ, ಪ್ರತಿಯೊಂದು ತಪ್ಪಿನ ಸರಿಪಡಿಸುವಿಕೆ All combine to build our future. ಕನಸುಗಳನ್ನು ಸಾಧಿಸಲು ಹಾದಿ ಕಠಿಣವಾಗಿರಬಹುದು, ಆದರೆ ಅದು ನಮ್ಮ ಜೀವನದ ಅತ್ಯಂತ ಅಮೂಲ್ಯ ಪ್ರಯಾಣ.

ಸ್ಪರ್ಧಾತ್ಮಕ ಪರೀಕ್ಷೆಯ ಯಶಸ್ಸು ಕನಸು + ಗುರಿ + ಮನಸ್ಥಿತಿ + ಪೂರ್ವ ಸಿದ್ಧತೆ ಎನ್ನುವ ಸಮೀಕರಣದ ಮೇಲೆ ಅವಲಂಬಿತವಾಗಿರುತ್ತದೆ. ಕನಸುಗಳು ಸ್ಪಷ್ಟವಾಗಿದ್ದರೆ, ಅವುಗಳನ್ನು ಸಾಧಿಸಲು ಬೇಕಾದ ಶ್ರಮವೂ ಸ್ಪಷ್ಟವಾಗುತ್ತದೆ. ಸರಿಯಾದ ಮನೋಭಾವ, ನಿಯಮಿತ ಅಭ್ಯಾಸ, ಸಮಯ ನಿರ್ವಹಣೆ, ಮತ್ತು ಆರೋಗ್ಯ ಕಾಳಜಿ

**— All combine to make us exam-ready.**

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003